ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 223 RNI Number : KNKAN/25/A2770 23-08-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :223 ರಾಯಚೂರು 23-08-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಎಲ್ಲಾ ಕ್ಷೇತ್ರಗಳ ಸುಧಾರಣೆಯೇ ನಮ್ಮ ಬದ್ಧತೆ : ಪ್ರಧಾನಿ ಮೋದಿ

ಎಲ್ಲಾ ಕ್ಷೇತ್ರಗಳ ಸುಧಾರಣೆಯೇ ನಮ್ಮ ಬದ್ಧತೆ : ಪ್ರಧಾನಿ ಮೋದಿ

ನವದೆಹಲಿ, ಆ.22- ಎಲ್ಲಾ ಕ್ಷೇತ್ರಗಳಲ್ಲಿನ ಸುಧಾರಣೆಗಳು ತಮ್ಮ ಸರ್ಕಾರದ ಬದ್ಧತೆಯಾಗಿದ್ದು, ದೇಶದ ನಿರಂತರ ಬೆಳವಣಿಗೆಯ ವೇಗವನ್ನು ಕಾಯ್ದುಕೊಳ್ಳಲು ಭಾರತ ಹಲವು ಕ್ರಮಗಳನ್ನು ಮುಂದುವರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಎಕನಾಮಿಕ್ ಟೈಮ್ಸ್ ವರ್ಲ್ಡ್ ಲೀಡರ್ಸ್ ಫೋರಂ ಉದ್ದೇಶಿಸಿ ಮಾತನಾಡಿದ ಅವರು, ಭಾರತ ತನ್ನ ನೀತಿಗಳಲ್ಲಿ ರಾಜಕೀಯ ಸ್ಥಿರತೆ ಮತ್ತು ನಿರಂತರತೆಯನ್ನು ಹೊಂದಿದೆ. ಹೀಗಾಗಿ ಜಗತ್ತು ಭಾರತವನ್ನು ಬೆಳವಣಿಗೆ ಮತ್ತು ಭರವಸೆಯ ಉಜ್ವಲ ತಾಣವಾಗಿ ನೋಡುತ್ತಿದೆ ಎಂದರು.

ನಿರಂತರ ಬೆಳವಣಿಗೆಯ ವೇಗವನ್ನು ಖಚಿತಪಡಿಸಿಕೊಳ್ಳಲು ಭಾರತ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಸುಧಾರಣೆಗಳೊಂದಿಗೆ ದೇಶ ಮುನ್ನಡೆಯುತ್ತಿದ್ದು, ಸುಧಾರಣೆಗಳು ನಮ್ಮ ಬದ್ಧತೆಯಾಗಿವೆ ಎಂದು ಹೇಳಿದರು.

ಸಂಪನ್ಮೂಲಗಳ ಶಸ್ತ್ರೀಕರಣದಿಂದಾಗಿ ಜಗತ್ತು ಬೆಳವಣಿಗೆಗೆ ಸಂಬಂಧಿಸಿದ ಹಲವು ಕಳವಳಗಳನ್ನು ಎದುರಿಸುತ್ತಿದೆ. ಆದರೆ ಭಾರತವನ್ನು ಮಾತ್ರ ಬೆಳವಣಿಗೆಯ ಉಜ್ವಲ ತಾಣವಾಗಿ ನೋಡಲಾಗುತ್ತಿದೆ ಎಂದು ಪ್ರಧಾನಿ ಹೇಳಿದರು.ಆಡಳಿತದ ಮೇಲೆ ಬಲವಾದ ಗಮನ ಕೇಂದ್ರೀಕರಿಸಿರುವ ಸುಧಾರಣೆಗಳಿಗೆ ಎನ್‌ಡಿಎ ಸರ್ಕಾರ ಸ್ಪಷ್ಟ ಮಾರ್ಗಸೂಚಿಯನ್ನು ಹೊಂದಿದೆ. ಹೆಚ್ಚಿನ ಉತ್ಪಾದನೆಗೆ ಉತ್ತೇಜನ ನೀಡುವ ಮೂಲಕ ಸರ್ಕಾರ ಪ್ರತಿಫಲ ನೀಡುತ್ತಿದೆ ಎಂದರು.



ಜನರನ್ನು ಕೊರತೆಯಲ್ಲಿಡುವುದು ಹಿಂದಿನ ಸರ್ಕಾರಗಳ ನೀತಿಯಾಗಿತ್ತು. ಇದರಿಂದ ಜನರು ತಮ್ಮ ಮೂಲಭೂತ ಅಗತ್ಯಗಳಿಗಾಗಿ ಸರ್ಕಾರದ ಮುಂದೆ ಬೇಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದು ಮೋದಿ ಆರೋಪಿಸಿದರು. ಹಿಂದಿನ ಸರ್ಕಾರಗಳ ಲೈಸೆನ್ಸ್ ರಾಜ್ ನಿರುದ್ಯೋಗದ ಹೊರೆಯನ್ನು ಹೆಚ್ಚಿಸಿತ್ತು. ಆದರೆ ತಮ್ಮ ಸರ್ಕಾರದ ಉತ್ಪಾದನೆ ಆಧಾರಿತ ಪ್ರೋತ್ಸಾಹಕ ಮಾದರಿ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ ಎಂದು ಹೇಳಿದರು.

''ನಾವು ಕೇವಲ ನಿಯಮಗಳನ್ನು ಬದಲಾಯಿಸುತ್ತಿಲ್ಲ. ಸಂಪೂರ್ಣ ನಿಯಂತ್ರಣ ವ್ಯವಸ್ಥೆಯನ್ನೇ ಬದಲಾಯಿಸುತ್ತಿದ್ದೇವೆ. ಕಾನೂನಿನ ಅಡಿಯಲ್ಲಿ ಸ್ಪಷ್ಟವಾಗಿ ನಿಷೇಧಿಸದ ಕೆಲಸವನ್ನು ಮಾಡಲು ಅನಗತ್ಯ ನಿಯಂತ್ರಣ ಇರಬಾರದು ಎಂಬುದು ನಮ್ಮ ಸರ್ಕಾರದ ನಂಬಿಕೆ'' ಎಂದು ಪ್ರಧಾನಿ ಹೇಳಿದರು.

ತಮ್ಮ ಸರ್ಕಾರ ನೀತಿ ಮಟ್ಟದಲ್ಲಿ ಮುಂದಿನ ಪೀಳಿಗೆಯ ಸುಧಾರಣೆಗಳನ್ನು ಜಾರಿಗೊಳಿಸುತ್ತಿದ್ದು, ಆಡಳಿತದ ಮಟ್ಟದಲ್ಲಿಯೂ ಹಾಗೂ ಜೀವನ ಸುಲಭಗೊಳಿಸುವ ನಿಟ್ಟಿನಲ್ಲಿಯೂ ಸುಧಾರಣೆಗಳನ್ನು ಕೈಗೊಳ್ಳುತ್ತಿದೆ ಎಂದರು. ನಿಷೇಧಿಸದ ಹೊರತು ಅನುಮತಿ ಎಂಬ ಮಾದರಿಯಿಂದ ನಿಷೇಧಿಸಿದ ಹೊರತು ಅನುಮತಿ ಎಂಬ ಮಾದರಿಯತ್ತ ಸಾಗುತ್ತಿದ್ದೇವೆ ಎಂದು ಹೇಳಿದರು.

ಭಾರತೀಯ ರೈಲ್ವೆ, ದೆಹಲಿ ಮೆಟ್ರೋ ಮತ್ತು ನಮೋ ರ್ಯಾಪಿಡ್ ರೈಲಿನಂತಹ ಕ್ಷೇತ್ರಗಳಲ್ಲಿನ ಸಣ್ಣ ಸುಧಾರಣೆಗಳೂ ದೇಶವು ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ ಎಂಬುದನ್ನು ತೋರಿಸುತ್ತವೆ ಎಂದು ಪ್ರಧಾನಿ ಹೇಳಿದರು.

ವಿದೇಶಿ ಉಪಗ್ರಹಗಳು ಭಾರತದ ನಕ್ಷೆಯನ್ನು ರಚಿಸಬಹುದಾದರೂ, ಅನುಮತಿಯಿಲ್ಲದೆ ಯಾರೂ ಭಾರತದ ನಕ್ಷೆಯನ್ನು ತಯಾರಿಸಲು ಸಾಧ್ಯವಿಲ್ಲ ಎಂಬಂತಹ ನಿಯಮಗಳು ಈ ಹಿಂದೆ ಇದ್ದವು. ಆದರೆ ತಮ್ಮ ಸರ್ಕಾರ ಈ ವ್ಯವಸ್ಥೆಯಲ್ಲಿ ಬದಲಾವಣೆ ತಂದಿದೆ ಎಂದು ಅವರು ಹೇಳಿದರು.

ಗಡಿ ಮೂಲಸೌಕರ್ಯವು ಭಾರತದ ಶಕ್ತಿಯಾಗಿರಬೇಕೇ ಹೊರತು ದೌರ್ಬಲ್ಯವಾಗಬಾರದು ಎಂದು ಸರ್ಕಾರ ನಿರ್ಧರಿಸಿದೆ. ಈ ಮೂಲಕ ಭಾರತದ ಗಡಿ ಮೂಲಸೌಕರ್ಯದ ಚಿತ್ರಣವನ್ನೇ ಬದಲಾಯಿಸಿದ್ದೇವೆ ಎಂದರು. ವಿಶ್ವದಲ್ಲೇ ಅತ್ಯಂತ ಅಗ್ಗದ ಡೇಟಾ ಭಾರತದಲ್ಲಿ ಲಭ್ಯವಿದೆ. ದೇಶವು ಅಗ್ಗದ ಮತ್ತು ಗುಣಮಟ್ಟದ ಮೊಬೈಲ್ ಫೋನ್‌ಗಳನ್ನು ತಯಾರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಅಪಘಾತದಲ್ಲಿ ಗಾಯಗೊಂಡ ಯುವಕನನ್ನು ಸ್ವತಃ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ ಶಾಸಕ ಬಸನಗೌಡ ತುರುವಿಹಾಳ

ಸಿಂಧನೂರು,ಆ.22-

ಕುಷ್ಟಗಿ ರಸ್ತೆಯ ಮಲ್ಲದಗುಡ್ಡ ಗ್ರಾಮದ ಬಳಿ ಸಂಭವಿಸಿದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ಮೂರನೇ ಕ್ಯಾಂಪ್ ನಿವಾಸಿ ಮಹೇಶ್ ಎಂಬ ಯುವಕನನ್ನು ಮಸ್ಕಿ ಶಾಸಕ ಬಸನಗೌಡ ಪಾಟೀಲ್ ತುರುವಿಹಾಳ ಅವರು ಸ್ವತಃ ತಮ್ಮ ವಾಹನದಲ್ಲಿ ಆಸ್ಪತ್ರೆಗೆ ಕರೆದೊಯ್ದು, ಚಿಕಿತ್ಸೆ ಕೊಡಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ.



ವಿರುಪಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಲ್ಲದಗುಡ್ಡ ಗ್ರಾಮದ ಕುಷ್ಟಗಿ ಮಾರ್ಗದಲ್ಲಿ ಅಪಘಾತ ಸಂಭವಿಸಿದ್ದು, ಘಟನೆಯಲ್ಲಿ ಮೂರನೇ ಕ್ಯಾಂಪ್‌ನ ಮಹೇಶ್ ಗಂಭೀರವಾಗಿ ಗಾಯಗೊಂಡಿದ್ದರು. ಅಪಘಾತದ ಸ್ಥಳದಲ್ಲಿ ಪರಿಸ್ಥಿತಿ ಗಮನಿಸಿದ ಶಾಸಕ ಬಸನಗೌಡ ಪಾಟೀಲ್ ತುರುವಿಹಾಳ ಅವರು ತಡಮಾಡದೆ ಗಾಯಾಳುವನ್ನು ತಮ್ಮ ವಾಹನದಲ್ಲೇ ಕರೆದುಕೊಂಡು ಸಿಂಧನೂರಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಆಸ್ಪತ್ರೆಗೆ ದಾಖಲಿಸಿದ ಬಳಿಕವೂ ಶಾಸಕ ತುರುವಿಹಾಳ


3 ನೇ ಪುಟಕ್ಕೆ

ರಾಯಚೂರು ವಿಜಯೋತ್ಸವ: ಯುವ ಪ್ರತಿಭೆಗಳಿಗೆ ರಾಜ್ಯ, ರಾಷ್ಟ್ರಮಟ್ಟದ ವೇದಿಕೆ ವೀರೇಂದ್ರ

ರಾಯಚೂರು,ಆ.22-

ಕಾಲೇಜು ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ತಮ್ಮ ಕೌಶಲ್ಯ ಪ್ರದರ್ಶಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಅಕ್ಟೋಬರ್ 25ರಂದು ನಗರದಲ್ಲಿ ರಾಯಚೂರು ವಿಜಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವೀರೇಂದ್ರ ಜಲ್ದಾರ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಯುವ ಪ್ರತಿಭೆಗಳಿಗೆ ಹೊಸ ಅವಕಾಶಗಳನ್ನು ಕಲ್ಪಿಸುವ



ಉ...ಗಿ ಕಾಲೇಜು ವಿದ್ಯಾರ್ಥಿಗಳ ತಂಡ ನೃತ್ಯಕ್ಕೆ ಆದ್ಯತೆ ನೀಡಲಾಗಿದ್ದು, ಪ್ರತಿಭಾವಂತ ತಂಡಗಳಿಗೆ ತಮ್ಮ ಪ್ರದರ್ಶನದ ಮೂಲಕ ಮುಂದಿನ ಹಂತಕ್ಕೆ ಆಯ್ಕೆಯಾಗುವ ಅವಕಾಶವಿದೆ ಎಂದರು.

ಆಸಕ್ತ ಕಾಲೇಜು ವಿದ್ಯಾರ್ಥಿಗಳ ತಂಡಗಳು ಸೆಪ್ಟೆಂಬರ್ 10ರೊಳಗೆ 3ರಿಂದ 5 ನಿಮಿಷಗಳ ಅವಧಿಯ ನೃತ್ಯದ ವಿಡಿಯೋವನ್ನು 9663905555 ಸಂಖ್ಯೆಗೆ ವಾಟ್ಸ್ ಆ್ಯಪ್ ಮೂಲಕ ಕಳುಹಿಸಬೇಕು. ಆಯ್ಕೆಯಾದ ತಂಡಗಳಿಗೆ ಅಕ್ಟೋಬರ್ 25ರಂದು ನಡೆಯುವ ರಾಯಚೂರು ವಿಜಯೋತ್ಸವದ ವೇದಿಕೆಯಲ್ಲಿ ನೃತ್ಯ ಪ್ರದರ್ಶಿಸಲು ಅವಕಾಶ ನೀಡಲಾಗುವುದು. ತಂಡದ ನೃತ್ಯಕ್ಕೆ ಯಾವುದೇ ಶುಲ್ಕವಿಲ್ಲ. ವೈಯಕ್ತಿಕ ನೃತ್ಯಕ್ಕೆ ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಯಚೂರು ವಿಜಯೋತ್ಸವದಲ್ಲಿ ಆಯ್ಕೆಯಾಗುವ 10 ಅತ್ಯುತ್ತಮ ತಂಡಗಳಿಗೆ ಡಿಸೆಂಬರ್ 10ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೆಂಗಳೂರು ವೈಭವ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿಶೇಷ ಅವಕಾಶ ದೊರೆಯಲಿದೆ. ಇದರಿಂದ ಜಿಲ್ಲೆಯ ವಿದ್ಯಾರ್ಥಿಗಳು ದೊಡ್ಡ ವೇದಿಕೆಯಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ಸಿಗಲಿದೆ ಎಂದು ಹೇಳಿದರು.

ಇಂದಿನ ವೇಗದ ಜೀವನಶೈಲಿಯಲ್ಲಿ ಯುವಕರ ಆರೋಗ್ಯದ ಕಡೆ ನಿರ್ಲಕ್ಷ್ಯ ಹೆಚ್ಚುತ್ತಿರುವುದು ಆತಂಕಕಾರಿ. ಧೂಮಪಾನ, ಮಾದಕ ವಸ್ತುಗಳ

3 ನೇ ಪುಟಕ್ಕೆ

ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ ಯಶಸ್ವಿಗೆ ಸಂಪೂರ್ಣ ಸಹಕಾರ

ಬೆಂಗಳೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಅಜಯ್ ಸಿಂಗ್ ಭರವಸೆ

ರಾಯಚೂರು,ಆ.22-

ರಾಯಚೂರಿನಲ್ಲಿ ನಡೆಯಲಿರುವ 41ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನದ ಯಶಸ್ವಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಅಜ ಯ್ ಧರ್ಮಸಿಂಗ್ ತಿಳಿಸಿದರು ಬೆಂಗಳೂರಿನಲ್ಲಿ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ನೇತೃತ್ವದಲ್ಲಿ ಭೇಟಿಯಾದ ರಾಯ ಚೂರು ಜಿಲ್ಲೆಯ ಪತಕರ್ತರ ಜೊತೆ ಸಮ್ಮೇಳನ ಪೂರ್ವಭಾವಿಯಾಗಿ ಮಾತುಕತೆ ನಡೆಸಿದರು. ರಾಯಚೂ ರಿನಲ್ಲಿ ಸಮ್ಮೇಳನ ನಡೆಯುತ್ತಿರು ವುದು ಬಹಳ



ಖುಷಿಯ ವಿಚಾರ. ಸಮ್ಮೇಳನದ ಎಲ್ಲಾ ಸಿದ್ಧತೆಗಳನ್ನು ಶೀಘ್ರದಲ್ಲಿ ಆರಂಭಿಸುವ ಕುರಿತು ಸಭೆ ನಡೆಸಲಾಗುವುದು. ಸಮ್ಮೇಳನದ ಎಲ್ಲಾ ಕೆಲಸ ಕಾರ್ಯಗಳು ಅಚ್ಚುಕಟ್ಟಾಗಿ ನಿರ್ವಹಿಸೋಣ. ಎಲ್ಲರೂ ಸಹಕಾರದೊಂದಿಗೆ ಒಗ್ಗೂಡಿ ಕೆಲಸ ಮಾಡಬೇಕಿದೆ ಎಂದು ತಿಳಿಸಿದರು.

ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಮಾತನಾಡಿ, ಕಳೆದ ಬಾರಿ ಬೀದರ್ ನಲ್ಲಿ ನಡೆದ 40ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನ ಯಶಸ್ವಿಯಾಗಿದ್ದು, ರಾಯಚೂರಿ ನಲ್ಲಿ ಕೂಡ ಅದ್ದೂರಿಯಾಗಿ ಸಮ್ಮೇಳನ ನಡೆಸಬೇಕಿದೆ. ಸಮ್ಮೇಳನಕ್ಕೆ ಈಗಿನಿಂದಲೇ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ತಿಳಿಸಿದರು. ಜಿಲ್ಲಾಧ್ಯಕ್ಷ ಆರ್ ಗುರುನಾಥ್, ರಾಜ್ಯ ಸಮಿತಿ ಸದಸ್ಯ ಬಸವರಾಜ ನಾಗಡದಿನ್ನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಯ್ಯ ಸ್ವಾಮಿಕುಕನೂರು, ಕಾರ್ಯಕಾರಿ ಸಮಿತಿ ಸದಸ್ಯರಾದ ವಿಶ್ವನಾಥ್ ಹೂರ್ಗಾ, ನೀಲಕಂಠ ಸ್ವಾಮಿ, ಪ್ರಸನ್ನ ಜೈನ್, ಲಕ್ಷ್ಮಣ್ ಕಪಗಲ್, ಪತ್ರಕರ್ತರಾದ ರಾಮಕೃಷ್ಣ ದಾಸರಿ, ಚನ್ನಬಸವ ಬಾಗಲವಾಡ, ಖಾನ್ ಸಾಬ್ ಮೊಮಿನ್, ಲಿಂಗಸುಗೂರು ತಾಲೂಕ ಅಧ್ಯಕ್ಷ ಶಿವರಾಜ್ ಕೆಂಭಾವಿ ಸೇರಿದಂತೆ ಇತರರು ಇದ್ದರು.

ಅಶ್ವಿನಿ ಅತ್ಯಾಚಾರ-ಕೊಲೆ ಪ್ರಕರಣ: ಕರ್ತವ್ಯಲೋಪ ಆರೋಪದ ಮೇಲೆ ನಾಲ್ವರು ಪೊಲೀಸರು ಅಮಾನತು

ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಯುವತಿ ಅಶ್ವಿನಿ ಅತ್ಯಾಚಾರ ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಸಿರವಾರ ಪೊಲೀಸ್ ಠಾಣೆಯ ನಾಲ್ವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಸಿರವಾರ ಠಾಣೆಯ ಮುಖ್ಯ ಪೇದೆಗಳಾದ ಭೀಮರಡ್ಡಿ ಹಾಗೂ ವೀರೇಶ ಮತ್ತು ಪೇದೆಗಳಾದ ದೇವರಾಜ ಹಾಗೂ ನಾಗರಾಜ ಅವರನ್ನು ಅಮಾನತು ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶುಗಿರಿ ಆದೇಶ ಹೊರಡಿಸಿದ್ದಾರೆ.

ಹೊಕ್ರಾಣಿ ಗ್ರಾಮದ ಅಶ್ವಿನಿ ಬುಧವಾರ ಸಂಜೆ ಬಹಿರ್ದೆಶೆಗೆ ತೆರಳಿ ನಾಪತ್ತೆಯಾಗಿದ್ದಾಳೆ ಎಂದು ಆಕೆಯ ಪಾಲಕರು ಸಿರವಾರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ಬಳಿಕ ಠಾಣೆಗೆ ತೆರಳಿ ದೂರು ದಾಖಲಿಸಲು ಮುಂದಾದರೂ ಪೊಲೀಸರು ಸೂಕ್ತವಾಗಿ ಸ್ಪಂದಿಸದೆ, ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸದೇ ನಿರ್ಲಕ್ಷ್ಯ ತೋರಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು.

ಈ ಹಿನ್ನೆಲೆಯಲ್ಲಿ ಅಶ್ವಿನಿಯ ಕುಟುಂಬಸ್ಥರು ಹಾಗೂ ದಲಿತ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ, ಸ್ಥಳಕ್ಕೆ ಆಗಮಿಸಿದ್ದ ಬಳ್ಳಾರಿ ಐಜಿಪಿ, ರಾಯಚೂರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮುಂದೆ ದೂರು ಸಲ್ಲಿಸಿದ್ದರು.

ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಪೊಲೀಸ್ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಂಡು ಅಮಾನತು ಮಾಡಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದ್ದರು. ಇದೀಗ ಕರ್ತವ್ಯಲೋಪದ ಆರೋಪದ ಆಧಾರದ ಮೇಲೆ ನಾಲ್ವರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಮಧುಮೇಹಿಗಳಿಗೆ ಸೂಕ್ತವಾದ ಎಸ್. ವಾರಾಹಿ ಭವನ ರೈಸ್ : ಸೌಭಾಗ್ಯ ಆರ್. ಲಸ್ಕರಿ



ಮಾನ್ವಿ,ಆ.22-

ನಮ್ಮ ಭಾರತೀಯ ಆಹಾರ ಶೈಲಿ ಯಲ್ಲಿ ಅನ್ನಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಆದರೆ ಸಾಮಾನ್ಯ ಅಕ್ಕಿಯಿಂದ ಮಾಡಿದ ಅನ್ನದಲ್ಲಿ ಗ್ಲೂಕೋಸ್ ಪ್ರಮಾಣ ಬೇಗನೆ ಬಿಡುಗಡೆಯಾಗುವುದರಿಂದ ದೇಹದಲ್ಲಿ ಮಧುಮೇಹ ಕಾಯಿಲೆ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಎಸ್. ವಾರಾಹಿ ಭವನ ರೈಸ್ ಕಂಪನಿಯು ಮಧುಮೇಹ ಕಾಯಿಲೆಯಿಂದ ಬಳಲುತ್ತಿರುವವರಿಗಾಗಿ ಸೂಕ್ತವಾದ ಪ್ರೋಟೀನ್, ಫೈಬರ್‌ನಿಂದ ಸಮೃದ್ಧವಾದ ಎಸ್. ವಾರಾಹಿ ಭವನ ರೈಸ್ ಎನ್ನುವ ಅಕ್ಕಿಯನ್ನು ಕಲ್ಯಾಣ ಕರ್ನಾಟಕ ಭಾಗದ ಜನರಿಗಾಗಿ ಬಿಡುಗಡೆ ಮಾಡಿದೆ ಎಂದು ಎಸ್. ವಾರಾಹಿ ಭವನ ರೈಸ್ ಕಂಪನಿಯ ಕಲ್ಯಾಣ ಕರ್ನಾಟಕ ವ್ಯವಸ್ಥಾಪಕರಾದ ಸೌಭಾಗ್ಯ ಆರ್. ಲಸ್ಕರಿ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಅಕ್ಕಿಯನ್ನು ಮಧುಮೇಹ ರೋಗಿಗಳು ನಿತ್ಯವೂ ಸೇವಿಸಿ ದೇಹದಲ್ಲಿ ಸಕ್ಕರೆ ಪ್ರಮಾಣವನ್ನು ನಿಯಂತ್ರಣದಲ್ಲಿ ಟ್ಟುಕೊಳ್ಳುವ ಮೂಲಕ ಉತ್ತಮ ಆರೋಗ್ಯವನ್ನು ಪಡೆಯಬಹುದು. ಈ ಅಕ್ಕಿಯು ಸಾಮಾನ್ಯ ಅಕ್ಕಿಯಂತೆ ರುಚಿಯನ್ನು ಹೊಂದಿದ್ದು ದೇಹದಲ್ಲಿ ನಿಧಾನವಾಗಿ ಗ್ಲೂಕೋಸ್ ಪ್ರಮಾಣವನ್ನು ಬಿಡುಗಡೆ ಮಾಡುವುದರಿಂದ ರಕ್ತದಲ್ಲಿ ಸಕ್ಕರೆ ಅಂಶ ನಿಯಂತ್ರಣದಲ್ಲಿರುತ್ತದೆ. ಆದ್ದರಿಂದ ಸಾಮಾನ್ಯ ಜನರಿಗೂ ಕೂಡಾ ಲಭ್ಯವಾಗುವಂತೆ ಅಕ್ಕಿಯ ಪ್ಯಾಕೆಟ್‌ಗಳನ್ನು ರೂಪಿಸಲಾಗಿದೆ. ಈ ಅಕ್ಕಿಯು ಕ್ಲಿನಿಕಲ್ ಪರೀಕ್ಷೆಗಳಲ್ಲಿ ಕೂಡಾ ಉತ್ತಮ ಫಲಿತಾಂಶವನ್ನು ನೀಡಿರುವುದರಿಂದ ಸಕ್ಕರೆ ಕಾಯಿಲೆ ಇರುವವರು ಇನ್ನು ಮುಂದೆ ಯಾವುದೇ ಆತಂಕವಿಲ್ಲದೆ ಎಸ್. ವಾರಾಹಿ ಭವನ ರೈಸ್ ಬಳಸಿ ಅನ್ನವನ್ನು ಸೇವಿಸಬಹುದು ಎಂದು ತಿಳಿಸಿದರು.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾನ್ವಿಯಲ್ಲಿ ಮಾರಾಟ ಶಾಖೆಯನ್ನು ಪ್ರಾರಂಭಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಾನ್ವಿಯ ಮಾರಾಟ ಪ್ರತಿನಿಧಿಗಳಾದ ಎಂ. ಬಿ. ಸಿದ್ದರಾಮಯ್ಯಸ್ವಾಮಿ, 91487 94455

3 ನೇ ಪುಟಕ್ಕೆ

ನಗರದಲ್ಲಿ ವರಮಹಾಲಕ್ಷ್ಮೀ ಹಬ್ಬದ ಸಡಗರ ಸಂಭ್ರಮ

ಲಕ್ಷ್ಮೀ ಸ್ವರೂಪದ ಮಹಿಳೆಯರಿಗೆ ಉಡಿ ತುಂಬುವುದು ಅಭಿವೃದ್ಧಿ ಸಂಕೇತ

ರಾಯಚೂರು,ಆ.22- ನಗರದ ವಾರ್ಡ್ ನಂ. 22ರ ಮಡ್ಡಿಪೇಟೆಯ ನಿವಾಸಿ ಛಾಯಾಗ್ರಾಹಕರು, ಕಲಾವಿದರು, ಪತ್ರಕರ್ತರಾದ ಶ್ರೀಮತಿ ಶ್ರೀದೇವಿ ಅಯ್ಯಪ್ಪ ಸ್ವಾಮಿ ಪಿಕಳಿಹಾಳರವರ ಮನೆಯಲ್ಲಿ ವರಮಹಾಲಕ್ಷ್ಮೀ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಮಧ್ಯರಾತ್ರಿಯಿಂದಲೇ ಶ್ರೀದೇವಿ ಹಿರೇಮಠ ಮತ್ತು ಸುಪುತ್ರಿ ಶಾಂಭವಿ ಹಿರೇಮಠರವರು ವರ ಮಹಾಲಕ್ಷ್ಮೀ ಮೂರ್ತಿ ಪ್ರತಿಷ್ಠಾಪನೆ ಅಲಂಕಾರಗೊಳಿಸಿ ಬೆಳಗಿನ ಬ್ರಾಹ್ಮಿಣಿ ಮುಹೂರ್ತದಲ್ಲಿ ದೀಪ ಬೆಳಗಿ ಮೊದಲು ಶ್ರೀ ವಿಘ್ನೇಶ್ವರಿಗೆ ಪೂಜೆ ಸಲ್ಲಿಸಿ ವರಮಹಾಲಕ್ಷ್ಮೀ ಮಾತೆಯ ಪೂಜೆಯನ್ನು ಪ್ರಾರಂಭಿಸಲಾಯಿತು.

ವರಮಹಾಲಕ್ಷ್ಮೀಗೆ ಚಿನ್ನ, ಬೆಳ್ಳಿ ಹಾಗೂ ಇನ್ನಿತರ ಆಭರಣಗಳು ಮತ್ತು ಹೂ ಪುಷ್ಪಗಳಿಂದ ಅಲಂಕರಿಸಿ ಹಲವು ಬಣ್ಣಗಳಿಂದ ಮಿಂಚುವ ವಿದ್ಯುತ್ ದೀಪಗಳ ಹಾರವನ್ನು ಹಾಕಿ ಮಹಾಲಕ್ಷ್ಮೀಗೆ ಶೃಂಗಾರಗೊಳಿಸಲಾಗಿತ್ತು.

ಜಲ ಪ್ರೋಕ್ಷಣೆ ಮಾಡಿ ಭಸ್ಮ ಕುಂಕುಮ ಹೂ ಪತ್ರಿಗಳನ್ನು ಸಲ್ಲಿಸಿ ಮನೆಯಲ್ಲಿ ಶುದ್ಧ ಮಡಿಯಿಂದ ತಯಾರಿಸಿದ ಹೋಳಿಗೆ, ತರಹ ತರಹದ ಉಂಡಿಗಳು, ಗಾರಿಗೆ, ಅನ್ನ ಪ್ರಸಾದ ಮತ್ತು ಇತರ ನಾನಾ ತರಹದ ನೈವೇದ್ಯವನ್ನು ಸಲ್ಲಿಸಿ ಪೂಜೆ ಮಹಾ ಮಂಗಳಾರುತಿಯನ್ನು ನೆರವೇರಿಸಲಾಯಿತು.

ನಂತರ ಒಂಬತ್ತು ಜನ ಮುತ್ತೈದೆ ಮಹಿಳೆಯರಿಗೆ ಹರಿಶಿಣ, ಕುಂಕುಮ,



ಹೂ ಮಾಲೆ, ಹಸಿರು ಬಳೆ, ಸೀರೆ, ಕುಪ್ಪಸ, ದಕ್ಷಿಣೆ ತಾಂಬೂಲಗಳೊಂದಿಗೆ ಉಡಿ ತುಂಬಿ ಮುತ್ತೈದೆಯರಲ್ಲಿ ನಮ್ಮ ದೇಶ ನಾಡು ಶಾಂತಿ ಸಮೃದ್ಧಿಯಿಂದ ತುಂಬಲಿ, ರೈತಾಪಿ ವರ್ಗದವರಿಗೆ ಕಾಲ ಕಾಲಕ್ಕೆ ಒಳ್ಳೆ ಮಳೆ ಬೆಳೆ ನೀಡು, ದೇಶ ರಕ್ಷಕರಾದ ವೀರ ಯೋಧರಿಗೆ ಮತ್ತಷ್ಟು ಶಕ್ತಿ ಕೊಡು, ನಮಗೂ ನಮ್ಮ ಕುಟುಂಬಕ್ಕೂ ಸುಖ, ಶಾಂತಿ, ಆರೋಗ್ಯ, ನೆಮ್ಮದಿ, ಅಷ್ಟೈಶ್ವರ್ಯವನ್ನು ನೀಡಿ ಕಾಪಾಡು ತಾಯಿ ಎಂದು ಬೇಡಿಕೊಳ್ಳಲಾಯಿತು.

3 ನೇ ಪುಟಕ್ಕೆ

ಮಲ್ಲಿಕಾರ್ಜುನ ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ಧೀಕರಣ: ದಲಿತ ಸಂಘರ್ಷ ಸಮಿತಿ ಪ್ರತಿಭಟನೆ



ಕಲಬುರಗಿ,ಆ.22-

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಿಸಿ ಹೋಮ-ಹವನ ನಡೆಸಿದ ಘಟನೆ ಖಂಡಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ವತಿಯಿಂದ ಶುಕ್ರವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ನಗರದ ಜಗತ್ ವೃತ್ತದಿಂದ ಆರಂಭಗೊಂಡ ಪ್ರತಿಭಟನಾ ರ್ಯಾಲಿ ಜಿಲ್ಲಾಧಿಕಾರಿ ಕಚೇರಿವರೆಗೆ ಸಾಗಿತು. ಈ ವೇಳೆ ಪ್ರತಿಭಟನಾಕಾರರು ಜಾತಿ ಆಧಾರಿತ ಅಸ್ಪೃಶ್ಯತೆ ಆಚರಣೆಯನ್ನು ಖಂಡಿಸಿ ಘೋಷಣೆಗಳನ್ನು ಕೂಗಿದರು. ಅಸ್ಪೃಶ್ಯತೆ ಆಚರಿಸಿದ ಸಂಘಟನೆಗಳ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಡಿ.ಜಿ. ಸಾಗರ, ಇತ್ತೀಚೆಗೆ ಉತ್ತರಾಖಂಡದ ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ್ದರು. ಬಳಿಕ ಕೆಲ ಕೋಮುವಾದಿ ಸಂಘಟನೆಗಳು ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಿಸಿ ಹೋಮ-ಹವನ ನಡೆಸಿರುವುದು ಜಾತಿ ಆಧಾರಿತ ಅಸ್ಪೃಶ್ಯತೆಯ ಆಚರಣೆಗೆ ಸಾಕ್ಷಿಯಾಗಿದೆ ಎಂದು ಆರೋಪಿಸಿದರು.

''ಸಂವಿಧಾನ ಜಾರಿಗೆ ಬಂದು 77 ವರ್ಷಗಳು ಕಳೆದರೂ ದೇಶದಲ್ಲಿ ಅಸ್ಪೃಶ್ಯತೆ ಜೀವಂತವಾಗಿರುವುದು ವಿಷಾದನೀಯ. ಜಾತಿಯ ಆಧಾರದಲ್ಲಿ ನಡೆಯುವ ಇಂತಹ ಅಮಾನವೀಯ ಆಚರಣೆಗಳನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ'' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಾತಿ ವ್ಯವಸ್ಥೆಯಲ್ಲಿ ವಂಚಿತ ಸಮುದಾಯದಿಂದ ಬಂದ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ತ್ಯಾಗ, ಹೋರಾಟ ಹಾಗೂ ಪ್ರಾಮಾಣಿಕತೆಯಿಂದ ರಾಷ್ಟ್ರದ ಪ್ರಮುಖ ನಾಯಕರಾಗಿ ಬೆಳೆದಿದ್ದಾರೆ. ಅಂತಹ ನಾಯಕನ ಮನೋಸ್ಥೈರ್ಯ ಕುಗ್ಗಿಸುವ ಉದ್ದೇಶದಿಂದ ನಡೆದಿರುವ ಕೃತ್ಯವನ್ನು ದಲಿತ ಸಂಘರ್ಷ ಸಮಿತಿ ತೀವ್ರವಾಗಿ ಖಂಡಿಸುತ್ತದೆ ಎಂದರು.

ಇದು ಕೇವಲ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾಡಿದ ಅವಮಾನವಲ್ಲ. ದೇಶದ ಶೋಷಿತ ಸಮುದಾಯಕ್ಕೆ ಹಾಗೂ ಸಂವಿಧಾನ ಮತ್ತು ಕಾನೂನು ವ್ಯವಸ್ಥೆಗೆ ಮಾಡಿದ ಅಪಮಾನವಾಗಿದೆ. ಇಂತಹ ಜಾತಿವಾದಿ ಹಾಗೂ ಸಂವಿಧಾನ ವಿರೋಧಿ ಆಚರಣೆಗಳಿಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಿಸಿ ಹೋಮ-ಹವನ ನಡೆಸಿದವರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ, 1989 ಹಾಗೂ ಅಸ್ಪೃಶ್ಯತೆ ಆಚರಣೆ ವಿರೋಧಿ ಕಾನೂನುಗಳ ಅಡಿಯಲ್ಲಿ ಪ್ರಕರಣ ದಾಖಲಿಸಿ, ತಪ್ಪಿತಸ್ಥರನ್ನು ಬಂಧಿಸಬೇಕು ಎಂದು ಡಿ.ಜಿ. ಸಾಗರ ಆಗ್ರಹಿಸಿದರು.

''ಸಂವಿಧಾನ ಅಸ್ಪೃಶ್ಯತೆ ಆಚರಣೆಯನ್ನು ನಿಷೇಧಿಸಿದೆ. ದೇಶದ ಆಡಳಿತ ಮತ್ತು ಸಮಾಜ ಸಂವಿಧಾನದ ಆಶಯಗಳ ಆಧಾರದ ಮೇಲೆ ನಡೆಯಬೇಕಾಗಿದೆ. ಆದರೆ ಇಂತಹ ಘಟನೆಗಳು ಸಂವಿಧಾನದ ಆಶಯಗಳಿಗೆ ಧಕ್ಕೆ ತರುವಂತಿವೆ. ಮನುವಾದಿ ಹಾಗೂ ಜಾತಿವಾದಿ ಮನೋಭಾವಗಳಿಗೆ ಕಡಿವಾಣ ಹಾಕುವುದು ಅಗತ್ಯ'' ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಸಮಿತಿಯ ರಾಜ್ಯ ಖಜಾಂಚಿ ಬಿ.ಸಿ. ವಾಲಿ, ಜಿಲ್ಲಾ ಮುಖಂಡರಾದ ಸುರೇಶ್ ಹಾದಿಮನಿ, ಎಸ್.ಪಿ. ಸುಳ್ಳದ, ರೇವಣಸಿದ್ದ ಜಾಲಿ, ಎಚ್. ಶಂಕರ, ಪ್ರಕಾಶ್ ಮೂಲಭಾರತಿ ಸೇರಿದಂತೆ ಹಲವರು ಭಾಗವಹಿಸಿದ್ದರು.



ಕಲೆ ಮನಸ್ಸಿಗೆ ನೆಮ್ಮದಿ ನೀಡುತ್ತದೆ: ರಾಮೇಶ್ವರ್ ಬಿರಾದಾರ್

ಬೀದರ್,ಆ.22-

ಕಲೆ ಒಂದು ಸೌಂದರ್ಯದ ಭಾಗವಾಗಿದೆ. ಅದು ಮನಸ್ಸಿಗೆ ಶಾಂತಿ ನೀಡುತ್ತದೆ ಎಂದು ಮುಖ್ಯಗುರು ರಾಮೇಶ್ವರ್ ಬಿರಾದಾರ್ ಅವರು ಹೇಳಿದರು.

ಕಮಲನಗರದ ಶಾಂತಿವರ್ಧಕ ಪದವಿ ಪೂರ್ವ ಕಾಲೇಜು ಕಮಲನಗರನಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಎಜುಕೇಷನ್ ಆರ್ಟ್ ಮತ್ತು ಕಲ್ಚರರ್ ವೆಲ್ಫೇರ್ ಸೋಸೈಟಿ ಹಾಗೂ ಕನ್ನಡ ಮತ್ತು ಸಾಂಸ್ಕೃತಿ ಇಲಾಖೆಯವರ ಸಹಯೋಗದಲ್ಲಿ ಗುರುವಾರ ನಡೆದ ರಂಗೋಲಿ ಸ್ಪರ್ಧೆಯಲ್ಲಿ ಅವರು ಮಾತನಾಡಿದರು.

ರಂಗೋಲಿ ಇಳಿಸುವ ಕಲೆಗೆ ಒಂದು ಭಾರತೀಯ ಪರಂಪರೆಯ ಇತಿಹಾಸವಿದೆ. ಸುಖ, ಶಾಂತಿಗಾಗಿ ಮನೆಯ ಮುಂದೆ ಜನರು ರಂಗೋಲಿ ಬಿಡಿಸುತ್ತಾರೆ. ಇದಕ್ಕಿಂತ ಮುಂಚೆ ಅಕ್ಕಿಯಿಂದಲೇ ಮನೆ ಮುಂದೆ ರಂಗೋಲಿ ಬಿಡಿಸುತ್ತಿದ್ದರು. ಅದನ್ನು ತಿನ್ನಲು ಹಕ್ಕಿಗಳು ಬರುತ್ತಿದ್ದವು. ಆ ಹಕ್ಕಿಗಳ ಇಂಪಾದ ಧ್ವನಿ ಕೇಳುವುದೇ ಆನಂದವಾಗಿತ್ತು ಎಂದರು.

ಓಂಕಾಂತ್ ಸೂರ್ಯಾವಂಶಿ ಅವರು ಮಾತನಾಡಿ, ಯಾವುದೆ ಕೆಲಸ ಮಾಡಿದರೂ ಕೂಡ ಭಕ್ತಿಯಿಂದ ಮಾಡಬೇಕು. ಕಲೆ ಕೂಡ ಸ್ಪರ್ದೆ, ಭಕ್ತಿಯಿಂದ, ಭಾವನೆಯಿಂದ ಮಾಡಿದರೆ ಒಲಿಯುತ್ತದೆ. ಯಾವುದೇ ಕೆಲಸ ಮಾಡಿದರೂ ಕೂಡ ಮನಸ್ಸಿಟ್ಟು ಮಾಡಬೇಕು ಎಂದು ಹೇಳಿದರು.

ಈ ರಂಗೋಲಿ ಸ್ಪರ್ಧೆಯಲ್ಲಿ 20ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಇದರಲ್ಲಿ ಪ್ರಿಯಾ ಪ್ರಥಮ ಸ್ಥಾನ, ಪ್ರಿಯಂಕಾ ದ್ವಿತಿಯ ಸ್ಥಾನ ಹಾಗೂ ರಾಜೇಶ್ವರಿ ತೃತಿಯ ಸ್ಥಾನ ಪಡೆದರು. ವಿಜೇತರಿಗೆ ಬಹುಮಾನ ಮತ್ತು ಪ್ರಮಾಣ ಪತ್ರ ವಿತರಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ರಮೇಶ್ ಬಿರಾದಾರ, ದಿನೇಶ್ ಆರ್. ವಾನಖೆಡೆ, ಪುಂಡಲೀಕ್ ಹಾಗೂ ಅಜಯ್ ರಾಂಪುರೆ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಮಾನಿಸಿರುವುದು ಈ ನೆಲಕ್ಕೆ ಮಾಡಿದ ಅವಮಾನ: ಪ್ರೊ. ಪೋತೆ



ಕಲಬುರಗಿ,ಆ.22-

ಡಾ. ಬಿ.ಆರ್. ಅಂಬೇಡ್ಕರ್ ಅವರು ಕೇವಲ ಶೋಷಿತ ವರ್ಗದವರಿಗಾಗಿ ಸಂವಿಧಾನ ರಚಿಸಿಲ್ಲ. ದೇಶದ ಪ್ರತಿಯೊಬ್ಬ ನಾಗರಿಕನೂ ಸಂವಿಧಾನದ ಸೌಲಭ್ಯಗಳನ್ನು ಅನುಭವಿಸುತ್ತಿದ್ದಾನೆ. ಸಂವಿಧಾನದ ಆಶಯಗಳ ರಕ್ಷಣೆಗಾಗಿ ಶ್ರಮಿಸುತ್ತಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಮಾನಿಸಿರುವುದು ಬುದ್ಧ, ಬಸವ, ಗಾಂಧಿ ಹಾಗೂ ಅಂಬೇಡ್ಕರ್ ಅವರ ಚಿಂತನೆಗಳ ನೆಲದಲ್ಲಿ ನಡೆದ ಹೀನ ಕೃತ್ಯವಾಗಿದೆ ಎಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ಕಲಾನಿಕಾಯದ ಡೀನ್ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಚ್.ಟಿ. ಪೋತೆ ಹೇಳಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹರಿಹರ ಸಭಾಂಗಣದಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ: ಸಮಕಾಲೀನ ತಲ್ಲಣಗಳು ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ಮನುಸ್ಮೃತಿ ದಹನ ಹಾಗೂ ಮಹಾಡ್ ಚಳವಳಿಯ ಮೂಲಕ ಸಮಾನತೆಗಾಗಿ ಹೋರಾಟ ನಡೆಸಿ ನೂರು ವರ್ಷಗಳು ಕಳೆದಿವೆ. ಹುಟ್ಟಿನಿಂದಲೇ ಸಂಕಷ್ಟ, ಅವಮಾನ ಹಾಗೂ ಅಪಮಾನಗಳನ್ನು ಅನುಭವಿಸಿದ ಅಂಬೇಡ್ಕರ್ ಅವರಿಗೆ ಇಂದಿಗೂ ಅವಮಾನ ಮಾಡಲಾಗುತ್ತಿರುವುದು ವಿಷಾದನೀಯ.

ಸಾಂಪ್ರದಾಯಿಕ ವ್ಯವಸ್ಥೆ ಹಾಗೂ ಗುಲಾಮಗಿರಿಯ ಮನಸ್ಥಿತಿಯಿಂದ ಹೊರಬಂದು ಅನ್ಯಾಯ ಮತ್ತು ಅವಮಾನಗಳ ವಿರುದ್ಧ ಧ್ವನಿ ಎತ್ತದಿದ್ದರೆ ಶೋಷಣೆಯಿಂದ ಮುಕ್ತಿ ಸಾಧ್ಯವಿಲ್ಲ ಎಂದರು.

ವೈಚಾರಿಕ ಚಿಂತಕ ಹಾಗೂ ಶರಣ ಸಾಹಿತಿ ಡಾ. ಜೆ.ಎಸ್. ಪಾಟೀಲ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಭಾರತವು ಸಂಘರ್ಷ ಹಾಗೂ ಚಳವಳಿಗಳ ನೆಲವಾಗಿದೆ. ಮನುಸ್ಮೃತಿಯ ನೆಲೆಯಲ್ಲಿ ದೇವರು ಮತ್ತು ಧರ್ಮದ ಹೆಸರಿನಲ್ಲಿ ಅಸ್ಪೃಶ್ಯರ ಮೇಲೆ ನಿರಂತರ ಶೋಷಣೆ ನಡೆಯುತ್ತಿದೆ. ಇಡೀ ಸಮಾಜ ವ್ಯವಸ್ಥೆಯನ್ನು ತಾರತಮ್ಯದ ನೆಲೆಯಲ್ಲಿ ಕಟ್ಟಿಹಾಕುವ ಹುನ್ನಾರಗಳು ಹೆಚ್ಚಾಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಕಲಬುರಗಿಯ ಪ್ರಜ್ಞಾವಂತ ಸಮಾಜ, ಬುದ್ಧಿಜೀವಿಗಳು ಹಾಗೂ ಹೋರಾಟಗಾರರು ಇಂತಹ ಬೆಳವಣಿಗೆಗಳ ವಿರುದ್ಧ ಧ್ವನಿ ಎತ್ತದಿರುವುದು ವಿಷಾದಕರ. ಬುದ್ಧ ಹಾಗೂ ಬಸವಣ್ಣನ ಕಾಲದಿಂದಲೂ ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಮತ್ತು ಶೋಷಿತರ ಏಳಿಗೆಗಾಗಿ ನಿರಂತರ ಚಳವಳಿಗಳು ನಡೆದಿವೆ. ಅನ್ಯಾಯದ ವಿರುದ್ಧ ಧ್ವನಿ ಎತ್ತದೆ ತಾರತಮ್ಯವನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂದರು.

ಮನುಷ್ಯ ಸಮಾಜದ ದೈನಂದಿನ ಬದುಕಿಗೆ ಅಗತ್ಯವಾದ ಜ್ಞಾನ ಹಾಗೂ ಸಮಾನತೆಯ ಸಂದೇಶವನ್ನು ಶರಣರು ನೀಡಿದ್ದಾರೆ. ಅವರ ವಿಚಾರಧಾರೆಗಳನ್ನು ಅನುಸರಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಎಂ.ಬಿ. ಕಟ್ಟಿ ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂದರ್ಶಕ ಪ್ರಾಧ್ಯಾಪಕ ಡಾ. ಸೂರ್ಯಕಾಂತ್ ಸುಜ್ಯಾತ್, ವಿವಿಧ ವಿಭಾಗಗಳ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಂಶೋಧನ ಸಂಘ ಹಾಗೂ ಕನ್ನಡ ಸಾಹಿತ್ಯ ಸಂಘದ ಪದಾಧಿಕಾರಿಗಳು, ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಗೀತ ವಿಭಾಗದ ಅಧ್ಯಾಪಕಿ ಡಾ. ಜಯದಾನಮ್ಮ ವಚನ ಗಾಯನ ಪ್ರಸ್ತುತಪಡಿಸಿದರು. ಡಾ. ಶಿವಗಂಗಾ ಬಿಲಗುಂದಿ ವಂದಿಸಿದರು. ಡಾ. ನಂದಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

ರಾಮಸಮುದ್ರ, ಮುಂಡರಗಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಯೋಜನಾ ನಿರ್ದೇಶಕರು ಸಿ.ಬಿ. ದೇವರಮನೆ ಭೇಟಿ

ಕೆರೆ ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟಕ್ಕೆ ಆದ್ಯತೆ ನೀಡಿ



ಯಾದಗಿರಿ,ಆ.22-

ಯಾದಗಿರಿ ತಾಲೂಕಿನ ರಾಮಸಮುದ್ರ ಹಾಗೂ ಮುಂಡರಗಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ವಿಬಿಜಿ ರಾಮ್ ಜಿ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಸಮಗ್ರ ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಜಿಲ್ಲಾ ಪಂಚಾಯತ್ ಯಾದಗಿರಿಯ ಯೋಜನಾ ನಿರ್ದೇಶಕರು ಸಿ.ಬಿ. ದೇವರಮನೆ ಅವರು ಭೇಟಿ ನೀಡಿ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು.

ರಾಮಸಮುದ್ರ ಹಾಗೂ ಮುಂಡರಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಸ್ಥಳಕ್ಕೆ ತೆರಳಿ ಪರಿಶೀಲಿಸಿದ ಅವರು,

ಕೆರೆಗಳ ಹೂಳೆತ್ತುವುದು, ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ, ನೀರು ಸಂಗ್ರಹ ಸಾಮರ್ಥ್ಯ ಹೆಚ್ಚಿಸುವುದು ಹಾಗೂ ಮಳೆ ನೀರನ್ನು ಅಮರ್ಪಕವಾಗಿ ಸಂಗ್ರಹಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಗುಣಮಟ್ಟ ಮತ್ತು ಪ್ರಗತಿಯನ್ನು ವೀಕ್ಷಿಸಿದರು.

ಕಾಮಗಾರಿಗಳನ್ನು ನಿಗದಿತ ಮಾನದಂಡಗಳಂತೆ ಹಾಗೂ ಗುಣಮಟ್ಟಕ್ಕೆ ಯಾವುದೇ ರೀತಿಯ ಧಕ್ಕೆಯಾಗದಂತೆ ಕೈಗೊಳ್ಳಬೇಕು.

ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೆ, ಹಾಗೂ ರೈತರಿಗೆ ಯೋಜನೆಯ ಸಮರ್ಪಕ ಪ್ರಯೋಜನ ದೊರೆಯುವಂತೆ ಕ್ರಮವಹಿಸಬೇಕು ಎಂದುತಾಂತ್ರಿಕ ಸಹಾಯಕರಿಗೆ ಸೂಚಿಸಿದರು.

ಕೆರೆಗಳ ಪುನಶ್ಚೇತನ ಮತ್ತು ಸಮಗ್ರ ಅಭಿವೃದ್ಧಿಯಿಂದ ಮಳೆಗಾಲದಲ್ಲಿ ಹೆಚ್ಚಿನ ಪ್ರಮಾಣದ ನೀರನ್ನು ಸಂಗ್ರಹಿಸಲು ಸಾಧ್ಯವಾಗುವುದರ ಜೊತೆಗೆ ಅಂತರ್ಜಲ ಮಟ್ಟ ಹೆಚ್ಚಳ, ಕೃಷಿ ಚಟುವಟಿಕೆಗಳಿಗೆ ನೀರಿನ ಲಭ್ಯತೆ ಹಾಗೂ ಗ್ರಾಮೀಣ ಪ್ರದೇಶದ ಪರಿಸರ ಸಂರಕ್ಷಣೆಗೆ ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದರು.

ವಿಬಿಜಿ ರಾಮ್ ಜಿ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಲ್ಲಿ ಸ್ಥಳೀಯ ಆಸಕ್ತ ಎಲ್ಲಾ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ

ಕಲ್ಪಿಸುವುದರ ಜೊತೆಗೆ ಗ್ರಾಮೀಣ ಮೂಲಸೌಕರ್ಯವನ್ನು ಬಲಪಡಿಸುವ ಉದ್ದೇಶವಿದ್ದು, ಯೋಜನೆಯ ಮಾರ್ಗಸೂಚಿಗಳಂತೆ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಯೋಜನೆ ಅಡಿ ಈಗಾಗಲೇ ಜಾಬ್ ಕಾರ್ಡ ಮೇಳ ಅಗಸ್ಟ್ 15 ರಿಂದ ಪ್ರಾರಂಭವಾಗಿದ್ದು ಗ್ರಾಮೀಣ ಪ್ರದೇಶದ ಜಾಬ್ ಕಾರ್ಡ ಇಲ್ಲದ ಎಲ್ಲಾ ಆಸಕ್ತ ಕೂಲಿ ಕಾರ್ಮಿಕರು ತಮ್ಮ ರೇಷನ್ ಕಾರ್ಡ , ಆಧಾರ್ ಕಾರ್ಡ, ಬ್ಯಾಂಕ್ ಪಾಸ್ ಬುಕ್ ಪ್ರತಿಯನ್ನು ನೀಡಿ ಹೊಸ ಜಾಬ್ ಕಾರ್ಡ (ಯೋಜನೆಯ ಮಾರ್ಗಸೂಚಿಯಂತೆ) ಪಡೆಯಬಹುದು.

ಈ ಸಂಧರ್ಭದಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳು, ಶ್ರೀಮತಿ ರೇಣುಕಮ್ಮ ಶಿವರಾಜ್, ಶ್ರೀಮತಿ ರೇಣುಕಾ, ತಾಂತ್ರಿಕ ಸಂಯೋಜಕರು, ಐಇಸಿ ಸಂಯೋಜಕರು ಭೀಮರೆಡ್ಡಿ ವಡಿಗೇರಿ, ಡಿಇಓ ಅಶೋಕ್ ಪಡಶೆಟ್ಟಿ, ತಾಂತ್ರಿಕ ಸಹಾಯಕರು ಬಸಪ್ಪ ಕುಂಬಾರ, ಗ್ರಾಮ ಕಾಯಕ ಮಿತ್ರ, ಸುಗಂಧಮ್ಮ ಮೇಟ ಹಾಗೂ ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

ಯಾದಗಿರಿ: 9.48 ಲಕ್ಷ ರೂ. ಮೌಲ್ಯದ ಅವಧಿ ಮುಗಿದ ಮದ್ಯ ನಾಶ



ಯಾದಗಿರಿ, ಆ.22-

ಯಾದಗಿರಿಯ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ ಮದ್ಯಮಳಿಗೆಯಲ್ಲಿದ್ದ ಸುಮಾರು 9,48,999 ರೂ. ಮೌಲ್ಯದ ಅವಧಿ ಮುಗಿದ ಮದ್ಯದ ದಾಸ್ತಾನನ್ನು ದಿನಾಂಕ 19-08-2026 ರಂದು ಯಶಸ್ವಿಯಾಗಿ ನಾಶಪಡಿಸಲಾಗಿದೆ.

ಶಹಾಪುರ ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರಾದ ಹರ್ಷ ರಾಜ್ ಬಿ ಅವರ ಸಮ್ಮುಖದಲ್ಲಿ ಪರಿಸರಕ್ಕೆ ಯಾವುದೇ ಹಾನಿಯಾಗದಂತೆ ಸುರಕ್ಷಿತ ಸ್ಥಳದಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು. ಒಟ್ಟು 383 ಪೆಟ್ಟಿಗೆಗಳು ಹಾಗೂ 24 ಬಿಡಿ ಬಾಟಲಿಗಳಲ್ಲಿದ್ದ ವಿವಿಧ ಬ್ರ್ಯಾಂಡ್‌ನ ಬಿಯರ್ ಹಾಗೂ ಪಾನೀಯಗಳನ್ನು ನಾಶಗೊಳಿಸಲಾಗಿದೆ. ಬ್ರೀಜರ್ ಎಕ್ಸೋಟಿಕ್ ಜಮ್ಮೈ ಕನ್ ಪ್ಯಾಷನ್ ಫ್ಲೇವರ್ (275 ಎಂಎಲ್): 09 ಪೆಟ್ಟಿಗೆ, ಬ್ಲ್ಯಾಕ್ ಫೋರ್ಟ್ ಸೂಪರ್ ಸ್ಟ್ರಾಂಗ್ ಬಿಯರ್ (650 ಎಂಎಲ್): 10 ಪೆಟ್ಟಿಗೆ, ಅಮಸ್ಟೆಲ್ ಬಿರ್ ಗ್ರಾಂಡ್ ಸುಪ್ರೀಮ್ (650 ಎಂಎಲ್): 98 ಪೆಟ್ಟಿಗೆ, 11 ಬಾಟಲಿ, ಅಮಸ್ಟೆಲ್ ಬಿರ್ ಗ್ರಾಂಡ್ ಸುಪ್ರೀಮ್ ಕ್ಯಾನ್ (500 ಎಂಎಲ್): 21 ಪೆಟ್ಟಿಗೆ, ಬುಲೆಟ್ ಸೂಪರ್ ಸ್ಟ್ರಾಂಗ್ ಬಿಯರ್ ಕ್ಯಾನ್ (500 ಎಂಎಲ್): 88 ಪೆಟ್ಟಿಗೆ, ಕಿಂಗ್ ಫಿಷರ್ ಅಲ್ಟ್ರಾ ಮ್ಯಾಕ್ಸ್ ಪ್ರೀಮಿಯಮ್ ಸ್ಟ್ರಾಂಗ್ ಬಿಯರ್ ಕ್ಯಾನ್ (500 ಎಂಎಲ್): 44 ಪೆಟ್ಟಿಗೆ, ಬುಲೆಟ್ ಸೂಪರ್ ಸ್ಟ್ರಾಂಗ್ ಬಿಯರ್ (330 ಎಂಎಲ್): 83 ಪೆಟ್ಟಿಗೆ, ನಾಕ್ ಔಟ್ ಹೈ ಪಂಚ್ ಸ್ಟ್ರಾಂಗ್ ಬಿಯರ್ (300 ಎಂಎಲ್): 30 ಪೆಟ್ಟಿಗೆ ಹಾಗೂ ಕಿಂಗ್ ಫಿಷರ್ ಸ್ಟ್ರಾಂಗ್ ಪ್ರೀಮಿಯಮ್ ಬಿಯರ್ (330 ಎಂಎಲ್): 13 ಬಾಟಲಿ ನಾಶಪಡಿಸಲಾಗಿರುತ್ತದೆ.

ಈ ಸಂದರ್ಭದಲ್ಲಿ ಯಾದಗಿರಿ ತಾಲೂಕು ತಹಸೀಲ್ದಾರ್ ಕಾರ್ಯಾಲಯದ ಶಿರಸ್ತೇದಾರ್ ವೆಂಕಟೇಶ್, ಅಬಕಾರಿ ನಿರೀಕ್ಷಕಿ ರಮಾ, ಮದ್ಯಮಳಿಗೆ ವ್ಯವಸ್ಥಾಪಕ ಹೆಚ್.ಎಸ್. ಪಾಟೀಲ್, ಅಬಕಾರಿ ಪೇದೆ ಮಾರುತಿ ಪವಾರ್ ಸೇರಿದಂತೆ ಸಂಬಂಧಪಟ್ಟ ಮದ್ಯದ ಕಂಪನಿಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

ನೂಲಿಯ ಚಂದಯ್ಯ, ಬ್ರಹ್ಮಶ್ರೀ ನಾರಾಯಣ ಗುರು ಶ್ರೀಕೃಷ್ಣಜಯಂತಿ ಆಚರಣೆ

ಅರ್ಥಪೂರ್ಣ ಆಚರಣೆ, ಅಗತ್ಯ ಸಿದ್ಧತೆ ಕೈಗೊಳ್ಳಲು ಸೂಚನೆ



ಬಾಗಲಕೋಟೆ ,ಆ.22-

ಜಿಲ್ಲೆಯಲ್ಲಿ ಆಗಸ್ಟ 28 ರಂದು ಆಚರಿಸಲ್ಪಡುವ ನೂಲಿಯ ಚಂದಯ್ಯ ಹಾಗೂ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿ ಮತ್ತು ಸೆಪ್ಟೆಂಬರ 4 ರಂದು ಆಚರಿಸಲಾಗುವ ಶ್ರೀಕೃಷ್ಣ ಜಯಂತಿಯನ್ನು ಅರ್ಥಪೂರ್ಣವಾಗಿ ಹಾಗೂ ಸುವ್ಯವಸ್ಥಿತವಾಗಿ ಆಚರಿಸಲು ಅಗತ್ಯ ಸಿದ್ದತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳ ಕಚೇರಿಯ ಸಹಾಯಕ ಅಧಿಕಾರಿ ಪಿ.ಎಸ್.ಕಡಕಭಾವಿ ಸೂಚಿಸಿದರು.

ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಶುಕ್ರವಾರ ವಿವಿಧ ಜಯಂತಿಗಳ ಆಚರಣೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಆಗಸ್ಟ 28 ರಂದು ಜರಗುವ ನೂಲಿಯ ಚಂದಯ್ಯ ಜಯಂತಿಯನ್ನು ಜಿಲ್ಲಾಡಳಿತ ಭವನದಿಂದ ಮೆರವಣಿಗೆ ಹಾಗೂ ವೇದಿಕೆ ಕಾರ್ಯಕ್ರಮವನ್ನು ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದರು. ಅದೇ ದಿನ ಸಂಜೆ ವೇಳೆ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿಯನ್ನು ಸಹ ಅರ್ಥಪೂರ್ಣವಾಗಿ ಆಚರಿಸಲು ತಿಳಿಸಿದರು.

ಸೆಪ್ಟೆಂಬರ 4 ರಂದು ಆಚರಿಸಲ್ಪಡುವ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಣೆ ಎಲ್ಲ ರೀತಿಯ ಸಿದ್ದೆ ಕೈಗೊಳ್ಳಲು ತಿಳಿಸಿದರು. ಶಿಷ್ಠಾಚಾರದ ಪ್ರಕಾರ ಆಮಂತ್ರಣ ಮುದ್ರಣ, ಕಾರ್ಯಕ್ರಮದ ರೂಪುರೇಷೆ, ಸ್ಥಳ, ವೇದಿಕೆ ವ್ಯವಸ್ಥೆ, ಮೆರವಣಿಗೆ ಸೇರಿದಂತೆ ವಿವಿಧ ಸಿದ್ದತೆಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಜಯಂತಿ ಆಚರಣೆಗಳು ಯಾವುದೇ ಲೋಪವಿಲ್ಲದೇ ಶಾಂತಿಯುತವಾಗಿ ಹಾಗೂ ಎಲ್ಲ ಸಮುದಾಯಗಳ ಸಹಭಾಗಿತ್ವದಲ್ಲಿ ನಡೆಯುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಅಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ಸಮನ್ವಯದಿಂದ ನಿರ್ವಹಿಸಲು ತಿಳಿಸಿದರು.

ಶಾಲೆ, ನಗರಸಭೆ ಹಾಗೂ ಎಸ್‌ಡಿಎಂಎಫ್ ಕಾಮಗಾರಿ ಪರಿಶೀಲನೆ

ಶಾಲಾ ಕಟ್ಟಡದ ಸಮರ್ಪಕ ಬಳಕೆಗೆ ಡಿಸಿ ಸಂಗಪ್ಪ ಸೂಚನೆ



ಬಾಗಲಕೋಟೆ ,ಆ.22-

ಜಮಖಂಡಿ ನಗರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಅವರು ಶುಕ್ರವಾರ ಭೇಟಿ ನೀಡಿ ಶಾಲಾ ಕಟ್ಟಡ, ನಗರಸಭೆ ಚಟುವಟಿಕೆಗಳು ಹಾಗೂ ಎಸ್‌ಡಿಎಂಎಫ್ ಅನುದಾನದಡಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಜಮಖಂಡಿ ನಗರದ ಪರಶುರಾಮ ಬಾಹುರಾವ ಪಟವರ್ಧನ (ಪಿ.ಬಿ.ಹೈಸ್ಕೂಲ) ಶಾಲೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, 1979ರಲ್ಲಿ ನಿರ್ಮಾಣಗೊಂಡಿರುವ ಶಾಲಾ ಕಟ್ಟಡವನ್ನು ವೀಕ್ಷಿಸಿದರು.

ಕಟ್ಟಡದ ಸ್ಥಿತಿಗತಿಯನ್ನು ಪರಿಶೀಲಿಸಿ, ಕಟ್ಟಡ ಸುಸ್ಥಿತಿಯಲ್ಲಿರುವುದರಿಂದ ಅದನ್ನು ಸಮರ್ಪಕವಾಗಿ ಹಾಗೂ ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವಂತೆ ಶಾಲಾ ಶಿಕ್ಷಕರಿಗೆ ಸೂಚಿಸಿದರು. ಶಾಲೆಯ ಕಿಟಕಿ, ಬಾಗಿಲು ಹಾಗೂ ಮೇಲ್ಛಾವಣಿಗೆ ಅಗತ್ಯವಿರುವ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಪೌರಾಯುಕ್ತರಿಗೆ ನಿರ್ದೇಶನ ನೀಡಿದರು. ಶಾಲಾ ಮಕ್ಕಳೊಂದಿಗೆ ಸಂವಾದ ನಡೆಸಿದ ಜಿಲ್ಲಾಧಿಕಾರಿಗಳು, ಶಿಕ್ಷಕರ ಬೋಧನಾ ವಿಧಾನ, ಮಕ್ಕಳ ಕಲಿಕಾ ಚಟುವಟಿಕೆ ಹಾಗೂ ಮಧ್ಯಾಹ್ನದ ಬಿಸಿಯೂಟದ ಕುರಿತು ಮಾಹಿತಿ ಪಡೆದುಕೊಂಡರು.

ನಂತರ ಜಮಖಂಡಿ ನಗರಸಭೆ ಕಚೇರಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಆಸ್ತಿ ತೆರಿಗೆ, ನೀರಿನ ಕರ ಸಂಗ್ರಹ ಹಾಗೂ ನಗರಸಭೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕುರಿತು ಪೌರಾಯುಕ್ತರು ಮತ್ತು ಸಿಬ್ಬಂದಿಯೊಂದಿಗೆ ವಿವರವಾಗಿ ಚರ್ಚಿಸಿದರು. ನಗರಸಭೆಯ ಆದಾಯ ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು, ತೆರಿಗೆ ಸಂಗ್ರಹವನ್ನು ಸುಧಾರಿಸುವುದು ಹಾಗೂ ಸಾರ್ವಜನಿಕರಿಗೆ ಅಗತ್ಯ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸುವ ಕುರಿತು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಬಳಿಕ ಎಸ್‌ಡಿಎಂಎಫ್ ಅನುದಾನದಡಿ ಕೈಗೊಂಡಿರುವ ರೂ.179 ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಕಾಮಗಾರಿಗಳ ಪ್ರಗತಿ, ಗುಣಮಟ್ಟ ಹಾಗೂ ಅನುಷ್ಠಾನದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಈ ವೇಳೆ ನಗರಸಭೆ ಅಭಿಯಂತರರೊಂದಿಗೆ ಲಕ್ಕನಕೆರೆ ಬೈಪಾಸ್ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕುರಿತು ಚರ್ಚಿಸಿದ ಜಿಲ್ಲಾಧಿಕಾರಿಗಳು, ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಸಾರ್ವಜನಿಕರಿಗೆ ಗರಿಷ್ಠ ಅನುಕೂಲವಾಗುವ ರೀತಿಯಲ್ಲಿ ಕೈಗೊಳ್ಳುವಂತೆ ಸೂಚಿಸಿದರು.

ಸಾರ್ವಜನಿಕರಿಗೆ ಅಗತ್ಯ ಮೂಲಸೌಕರ್ಯ, ಉತ್ತಮ ರಸ್ತೆ ಹಾಗೂ ಸಮರ್ಪಕ ಚರಂಡಿ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಕಾಮಗಾರಿಗಳ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಒಂದನೇಯ ಪುಟದಿಂದ

ಅಪಘಾತದಲ್ಲಿ ಗಾಯಗೊಂಡ ಯುವಕನನ್ನು ಸ್ವತಃ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ ಶಾಸಕ ಬಸನಗೌಡ ತುರುವಿಹಾಳ

ಅವರು ಸ್ಥಳದಲ್ಲೇ ಇದ್ದು, ವೈದ್ಯರೊಂದಿಗೆ ಮಾತನಾಡಿ ಗಾಯಾಳುವಿಗೆ ತುರ್ತು ಚಿಕಿತ್ಸೆ ದೊರೆಯುವಂತೆ ನೋಡಿಕೊಂಡಿದ್ದಾರೆ. ಗಾಯಾಳುವಿನ ಚಿಕಿತ್ಸೆ ಯ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದುಕೊಂಡು, ಅಗತ್ಯ ಚಿಕಿತ್ಸೆ ನೀಡುವಂತೆ ಸೂಚಿಸಿದ್ದಾರೆ.

ಶಾಸಕರ ಈ ಸಮಯಪ್ರಜ್ಞೆ ಹಾಗೂ ಮಾನವೀಯ ನಡೆ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಅಧಿಕಾರ, ಸ್ಥಾನಮಾನಕ್ಕಿಂತ ಮಾನವೀಯತೆ ಮುಖ್ಯ ಎಂಬುದನ್ನು ಶಾಸಕರು ತಮ್ಮ ಕಾರ್ಯದ ಮೂಲಕ ತೋರಿಸಿದ್ದಾರೆ ಎಂದು ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.ಅಪಘಾತದ ಸಂದರ್ಭದಲ್ಲಿ ಗಾಯಾಳುವಿಗೆ ತಕ್ಷಣ ನೆರವಿಗೆ ಧಾವಿಸಿ, ಸ್ವತಃ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲು ಮುಂದಾದ ಶಾಸಕ ಬಸನಗೌಡ ಪಾಟೀಲ್ ತುರುವಿಹಾಳ ಅವರ ಕಾರ್ಯಕ್ಕೆ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದೆ.

ರಾಯಚೂರು ವಿಜಯೋತ್ಸವ: ಯುವ ಪ್ರತಿಭೆಗಳಿಗೆ ರಾಜ್ಯ, ರಾಷ್ಟ್ರಮಟ್ಟದ ವೇದಿಕೆ ವೀರೇಂದ್ರ

ಸೇವನೆ ಹಾಗೂ ಅಸಮರ್ಪಕ ನಿದ್ರೆಯಂತಹ ದುಶ್ಚಟಗಳಿಂದ ಯುವಕರು ದೂರವಿದ್ದು, ಕ್ರೀಡೆ, ಕಲೆ ಮತ್ತು ಆರೋಗ್ಯಕರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು. ಧೂಮಪಾನ ಬೇಡ, ಮಾದಕ ವಸ್ತು ಬೇಡ, ನಿದ್ರಾಹೀನ ರಾತ್ರಿಗಳಿಗೆ ವಿದಾಯ ಎಂಬ ಸಂದೇಶವನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ರಾಯಚೂರು ವಿಜಯೋತ್ಸ ವ ಕೇವಲ ಮನರಂಜನಾ ಕಾರ್ಯಕ್ರಮವಾಗದೆ, ಜಿಲ್ಲೆಯ ಯುವ ಪ್ರತಿಭೆಗಳಿಗೆ ಗುರುತಿನೊಂದಿಗೆ ಹೊಸ ಅವಕಾಶಗಳನ್ನು ಕಲ್ಪಿಸುವ ವೇದಿಕೆಯಾಗಬೇಕು. ಜಿಲ್ಲೆಯ ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಮೂಲಕ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ವೀರೇಂದ್ರ ಜಲ್ದಾರ್ ಮನವಿ ಮಾಡಿದರು.

ಸರ್ಕಾರ-ಎನ್‌ಜಿಓ ಸಹಭಾಗಿತ್ವಕ್ಕೆ ಒತ್ತು: ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ

ಸಂಪನ್ಮೂಲ ಕ್ರೋಢೀಕರಣ, ಉತ್ತಮ ಪದ್ಧತಿಗಳು, ನವೀನ ಮಾದರಿಗಳು ಹಾಗೂ ಯಶೋಗಾಥೆಗಳ ಹಂಚಿಕೆ ಮತ್ತು ನಿರಂತರ ಸಮನ್ವಯಕ್ಕಾಗಿ ಪರಿಣಾಮಕಾರಿ ಕಾರ್ಯವಿಧಾನ ರೂಪಿಸುವ ಬಗ್ಗೆಯೂ ಚರ್ಚೆ ನಡೆಯಿತು.

ಕಾರ್ಯಕ್ರಮಗಳ ಅನುಷ್ಠಾನದ ಸಂಖ್ಯೆಗೆ ಮಾತ್ರ ಸೀಮಿತವಾಗದೆ, ಅವುಗಳಿಂದ ಉಂಟಾಗುವ ಫಲಿತಾಂಶ ಹಾಗೂ ಜನರ ಜೀವನದಲ್ಲಿ ಕಂಡುಬರುವ ನೈಜ ಬದಲಾವಣೆಗೆ ಆದ್ಯತೆ ನೀಡುವ ಫಲಿತಾಂಶಾಧಾರಿತ ಅಭಿವೃದ್ಧಿ ದೃಷ್ಟಿಕೋನಕ್ಕೆ ಸಭೆಯಲ್ಲಿ ವಿಶೇಷ ಒತ್ತು ನೀಡಲಾಯಿತು.

ಸರ್ಕಾರದ ಆಡಳಿತಾತ್ಮಕ ವ್ಯವಸ್ಥೆ ಮತ್ತು ಸಾಂಸ್ಥಿಕ ಸಾಮರ್ಥ್ಯದೊಂದಿಗೆ ಎನ್‌ಜಿಓಗಳು ಹಾಗೂ ಅಭಿವೃದ್ಧಿ ಸಹಭಾಗಿಗಳ ತಾಂತ್ರಿಕ ಪರಿಣತಿ, ನವೀನತೆ ಮತ್ತು ಸಮುದಾಯದೊಂದಿಗಿನ ನೇರ ಸಂಪರ್ಕವನ್ನು ಸಮನ್ವಯಗೊಳಿಸುವ ಮೂಲಕ ಜಿಲ್ಲೆಯಲ್ಲಿ ಸಮನ್ವಿತ, ಪರಿಣಾಮಕಾರಿ ಹಾಗೂ ಸುಸ್ಥಿರ ಅಭಿವೃದ್ಧಿ ಸಾಧಿಸಲು ಸರ್ಕಾರಎನ್‌ಜಿಓ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸುವ ಅಗತ್ಯವನ್ನು ಸಭೆಯಲ್ಲಿ ಒತ್ತಿ ಹೇಳಲಾಯಿತು.

ನಗರದಲ್ಲಿ ವರಮಹಾಲಕ್ಷ್ಮೀ ಹಬ್ಬದ ಸಡಗರ ಸಂಭ್ರಮ

ಲಕ್ಷ್ಮೀ ಸ್ವರೂಪದ ಮಹಿಳೆಯರಿಗೆ ಉಡಿ ತುಂಬುವುದು ಅಭಿವೃದ್ಧಿ ಸಂಕೇತ

ನಂತರ ಉಡಿ ತುಂಬಿಸಿಕೊಂಡ ಮಹಿಳೆಯರಿಗೆ ಪ್ರಸಾದವನ್ನು ಸಲ್ಲಿಸಿ ಅವರು ಸಂತೃಪ್ತರಾದ ನಂತರ ಅವರಿಗೆ ದಕ್ಷಿಣೆ ನೀಡಿ ಆಶೀರ್ವಾದ ಪಡೆದರು.

ಮತ್ತೆ ಮಹಿಳೆಯರು ಇನ್ನಿತರರು ಆಹ್ವಾನ ನೀಡಿದ ಮನೆಗಳಿಗೆ ತೆರಳಿ ಅಲ್ಲಿಯೂ ಉಡಿ ತುಂಬಿಸಿಕೊಂಡು ಆ ಮನೆಗೆ ಆಶೀರ್ವಾದ ಮಾಡಿ ಹಾಗೇ ಮುಂದಿನ ಮನೆಗೆ ತೆರಳುವುದು ಸಂಪ್ರದಾಯವಾಗಿದೆ.

ಮಹಿಳೆ ಮತ್ತು ಯುವತಿಯರ ಸಡಗರ ಸಂಭಮದ ಹಬ್ಬವಾಗಿದೆ, ಈ ಹಬ್ಬವು ನಮ್ಮ ಭಾರತ ದೇಶದ ಮತ್ತು ನಮ್ಮ ನಾಡಿನ ಸಂಪ್ರದಾಯವಾಗಿದ್ದು, ಈಗಿನ ಯುವ ಪೀಳಿಗೆಯನ್ನು ಆಧ್ಯಾತ್ಮದ ಸನ್ಮಾರ್ಗ ತೋರಿಸುವ ಹಬ್ಬವಾಗಿದೆ, ಮಹಿಳೆ ಯುವತಿಯರೇ ಇಂಥ ಪೂಜೆ ಆಚರಣೆ ಮಾಡುವುದರಿಂದ ಅಲ್ಲಿ ಅನ್ನಪೂರ್ಣೇಶ್ವರಿ ಮತ್ತು ಧನಲಕ್ಷ್ಮೀಯರು ಸದಾ ನೆಲೆಸಿರುತ್ತಾರೆ ಎಂಬುದು ನಾವು ಶಿವ ಶರಣರ ನುಡಿಯಲ್ಲಿ ಹಾಗೂ ಪುರಾಣ ಪುಣ್ಯ ಕಥೆಗಳಲ್ಲಿ ಆಲಿಸಬಹುದಾಗಿದೆ, ಆದುದರಿಂದಲೇ ವಿಶೇಷವಾಗಿ ಶುಭ ಶ್ರಾವಣ ಮಾಸದಲ್ಲಿ ಈ ವರಮಹಾಲಕ್ಷ್ಮೀ ಹಬ್ಬವನ್ನು ಅದೆಸ್ಟೋ ವರ್ಷಗಳಿಂದಲೂ ದೇಶದಾದ್ಯಂತ ಸಾಂಪ್ರದಾಯಿಕವಾಗಿ ಆಚರಿಸಿಕೊಂಡು ಬರುತ್ತಿರುವುದು ಸಂಪ್ರದಾಯವಾಗಿದೆ.

ಯಾದಗಿರಿ: 9.48 ಲಕ್ಷ ರೂ. ಮೌಲ್ಯದ ಅವಧಿ ಮುಗಿದ ಮದ್ಯ ನಾಶ



ಯಾದಗಿರಿ, ಆ.22-

ಯಾದಗಿರಿಯ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತದ ಮದ್ಯಮಳಿಗೆಯಲ್ಲಿದ್ದ ಸುಮಾರು 9,48,999 ರೂ. ಮೌಲ್ಯ ದ ಅವಧಿ ಮುಗಿದ ಮದ್ಯದ ದಾಸ್ತಾನನ್ನು ದಿನಾಂಕ 19-08- 2026 ರಂದು ಯಶಸ್ವಿಯಾಗಿ ನಾಶಪಡಿಸಲಾಗಿದೆ.

ಶಹಾಪುರ ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರಾದ ಹರ್ಷ ರಾಜ್ ಬಿ ಅವರ ಸಮ್ಮುಖ ದಲ್ಲಿ ಪರಿಸರಕ್ಕೆ ಯಾವುದೇ ಹಾನಿಯಾಗದಂತೆ ಸುರಕ್ಷಿತ ಸ್ಥಳದಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು. ಒಟ್ಟು 383 ಪೆಟ್ಟಿಗೆಗಳು ಹಾಗೂ 24 ಬಿಡಿ ಬಾಟಲಿಗಳಲ್ಲಿದ್ದ ವಿವಿಧ ಬ್ರ್ಯಾಂಡ್‌ನ ಬಿಯರ್ ಹಾಗೂ ಪಾನೀಯಗಳನ್ನು ನಾಶಗೊಳಿಸಲಾಗಿದೆ. ಬ್ರೀಜರ್ ಎಕ್ಸೋಟಿಕ್ ಜಮೈಕನ್ ಪ್ಯಾಷನ್ ಫ್ಲೇವರ್ (275 ಎಂಎಲ್): 09 ಪೆಟ್ಟಿಗೆ, ಬ್ಲ್ಯಾಕ್ ಫೋರ್ಟ್ ಸೂಪರ್ ಸ್ಟ್ರಾಂಗ್ ಬಿಯರ್ (650 ಎಂಎಲ್): 10 ಪೆಟ್ಟಿಗೆ, ಅಮಸ್ಟೆಲ್ ಬಿರ್ ಗ್ರಾಂಡ್ ಸುಪ್ರೀಮ್ (650 ಎಂಎಲ್): 98 ಪೆಟ್ಟಿಗೆ, 11 ಬಾಟಲಿ, ಅಮಸ್ಟೆಲ್ ಬಿರ್ ಗ್ರಾಂಡ್ ಸುಪ್ರೀಮ್ ಕ್ಯಾನ್ (500 ಎಂಎಲ್): 21 ಪೆಟ್ಟಿಗೆ, ಬುಲೆಟ್ ಸೂಪರ್ ಸ್ಟ್ರಾಂಗ್ ಬಿಯರ್ ಕ್ಯಾನ್ (500 ಎಂಎಲ್): 88 ಪೆಟ್ಟಿಗೆ, ಕಿಂಗ್ ಫಿಷರ್ ಅಲ್ಟ್ರಾ ಮ್ಯಾಕ್ಸ್ ಪ್ರೀಮಿಯಮ್ ಸ್ಟ್ರಾಂಗ್ ಬಿಯರ್ ಕ್ಯಾನ್ (500 ಎಂಎಲ್): 44 ಪೆಟ್ಟಿಗೆ, ಬುಲೆಟ್ ಸೂಪರ್ ಸ್ಟ್ರಾಂಗ್ ಬಿಯರ್ (330 ಎಂಎಲ್): 83 ಪೆಟ್ಟಿಗೆ, ನಾಕ್ ಔಟ್ ಹೈ ಪಂಚ್ ಸ್ಟ್ರಾಂಗ್ ಬಿಯರ್ (300 ಎಂಎಲ್): 30 ಪೆಟ್ಟಿಗೆ ಹಾಗೂ ಕಿಂಗ್ ಫಿಷರ್ ಸ್ಟ್ರಾಂಗ್ ಪ್ರೀಮಿಯಮ್ ಬಿಯರ್ (330 ಎಂಎಲ್): 13 ಬಾಟಲಿ ನಾಶಪಡಿಸಲಾಗಿರುತ್ತದೆ.

ಈ ಸಂದರ್ಭದಲ್ಲಿ ಯಾದಗಿರಿ ತಾಲೂಕು ತಹಸೀಲ್ದಾರ್ ಕಾರ್ಯಾಲಯದ ಶಿರಸ್ತೇದಾರ್ ವೆಂಕಟೇಶ್, ಅಬಕಾರಿ ನಿರೀಕ್ಷಕಿ ರಮಾ, ಮದ್ಯಮಳಿಗೆ ವ್ಯವಸ್ಥಾಪಕ ಹೆಚ್.ಎಸ್. ಪಾಟೀಲ್, ಅಬಕಾರಿ ಪೇದೆ ಮಾರುತಿ ಪವಾರ್ ಸೇರಿದಂತೆ ಸಂಬಂಧಪಟ್ಟ ಮದ್ಯದ ಕಂಪನಿಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಪಟೇಲರ ದೃಢ ನಿರ್ಧಾರವೇ ಅಖಂಡ ಭಾರತಕ್ಕೆ ಮೂಲಾಧಾರ



ಬೀದರ್,ಆ.22-

ಸರ್ದಾರ್ ವಲ್ಲಭಭಾಯಿ ಪಟೇಲರ ದೃಢ ನಿರ್ಧಾರ ಹಾಗೂ ಕಠಿಣ ನಿರ್ಣಯಗಳೇ ದೇಶದ ಏಕತೆಗೆ ಬಲ ತಂದಿದ್ದು, ಅಖಂಡ ಭಾರತ ನಿರ್ಮಾಣದಲ್ಲಿ ಅವರ ಪಾತ್ರ ಅತ್ಯಂತ ಅನನ್ಯ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಮಂಜುನಾಥ ಸೊಳ್ಳೊಳ್ಳಿ ಹೇಳಿದರು.

ಶುಕ್ರವಾರ ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ನವದೆಹಲಿಯ ಸಂಸ್ಕೃತಿ ಸಚಿವಾಲಯ, ಕರ್ನಾಟಕ ಜಾನಪದ ಪರಿಷತ್ತು, ಕರ್ನಾಟಕ ಸಾಹಿತ್ಯ ಸಂಘ ಹಾಗೂ ಸಿದ್ದೇಶ್ವರ ಕಲ್ಚರಲ್ ಫೌಂಡೇಶನ್ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನೋತ್ಸವದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯದ ನಂತರ ದೇಶದ ಎಲ್ಲಾ ಸಂಸ್ಥಾನಗಳನ್ನು ಒಂದುಗೂಡಿಸಿ ಅಖಂಡ ಭಾರತ ನಿರ್ಮಾಣ ಮಾಡುವುದು ಅತ್ಯಂತ ಕಠಿಣ ಕೆಲಸವಾಗಿತ್ತು. ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಭಾಗದಲ್ಲಿದ್ದ ನಿಜಾಮನ ಆಳ್ವಿಕೆಯನ್ನು ಅಂತ್ಯಗೊಳಿಸಿ, ಭಾರತದಲ್ಲಿ ವಿಲೀನಗೊಳಿಸುವಲ್ಲಿ ಪಟೇಲರ ಕಟ್ಟುನಿಟ್ಟಿನ ನಿರ್ಧಾರಗಳು ಪ್ರಮುಖವಾಗಿದ್ದವು. ಅವರ ಈ ದೃಢ ಮನಸ್ಸು ಹಾಗೂ ಅಚಲ ಸ್ವಭಾವದಿಂದಾಗಿಯೇ ಅವರನ್ನು 'ಉಕ್ಕಿನ ಮನುಷ್ಯ' ಎಂದು ಗೌರವಿಸಲಾಗುತ್ತಿದೆ. ಇಂದು ಗುಜರಾತ್‌ನಲ್ಲಿ ನಿರ್ಮಿಸಲಾಗಿರುವ 'ಸ್ಟ್ಯಾಚ್ಯೂ ಆಫ್ ಯೂನಿಟಿ' ಪಟೇಲರ ಸಾಧನೆಗೆ ವಿಶ್ವಮಟ್ಟದಲ್ಲಿ ಹಿಡಿದ ಕನ್ನಡಿಯಾಗಿದೆ ಎಂದು ಬಣ್ಣಿಸಿದರು. ಯುವಜನತೆಗೆ ಪಟೇಲರ ದೇಶಭಕ್ತಿ ಹಾಗೂ ಆದರ್ಶಗಳು ಸದಾ ಮಾರ್ಗದರ್ಶಿಯಾಗಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಬೀದರ ಕನ್ನಡ ಸಾಹಿತ್ಯ ಸಂಘದ ಅಧ್ಯಕ್ಷರಾದ ಪ್ರೊ. ಜಗನ್ನಾಥ ಹೆಬ್ಬಾಳೆ ಅವರು ಮಾತನಾಡಿ ದೇಶದ ಸಾರ್ವಭೌಮತ್ವ ಮತ್ತು ಏಕತೆಗೆ ಧಕ್ಕೆ ತರುವಂತಹ ಅಥವಾ ದೇಶದ ವಿರುದ್ಧ ಹಗುರವಾಗಿ ಮಾತನಾಡುವವರಿಗೆ ವಿದ್ಯಾರ್ಥಿಗಳು ಮತ್ತು ಯುವಜನತೆ ತಕ್ಕ ಪಾಠ ಕಲಿಸಬೇಕು ಎಂದು ಹೇಳಿದರು.

ನಮಗೆ ಮೊದಲು ದೇಶ, ಆನಂತರ ನಾವು. ದೇಶದ ವಿಷಯ ಬಂದಾಗ ಜಾತಿ, ಮತ, ಧರ್ಮಗಳ ಭೇದಭಾವವಿರಬಾರದು ನಾವೆಲ್ಲರೂ ಭಾರತೀಯರು. ದೇಶದ ವಿರುದ್ಧ ಯಾರಾದರೂ ನಿಂದಿಸಿ ಮಾತನಾಡಿದರೆ ವಿದ್ಯಾರ್ಥಿಗಳು ಅವರಿಗೆ ತಕ್ಕ ಪಾಠ ಕಲಿಸುವ ಮೂಲಕ ಪ್ರತ್ಯುತ್ತರ ನೀಡಬೇಕು. ಇಂತಹ ವಿಷಯಗಳಲ್ಲಿ ಕಾನೂನು ಮತ್ತು ಸರ್ಕಾರಗಳು ಸಹ ದೇಶಪ್ರೇಮಿಗಳ ಪರವಾಗಿರುತ್ತವೆ ಎಂದು ಪ್ರತಿಪಾದಿಸಿದರು. ಇತಿಹಾಸವನ್ನು ಅರಿತವನು ಮಾತ್ರ ಹೊಸ ಇತಿಹಾಸ ಸೃಷ್ಟಿಸಲು ಸಾಧ್ಯ ಎಂಬ ಬಾಬಾಸಾಹೇಬ್ ಅಂಬೇಡ್ಕರ್ ಅವರ ಮಾತಿನಂತೆ, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಟೇಲರಂತಹ ಮಹಾನ್ ನಾಯಕರ ದೇಶಪ್ರೇಮ ಹಾಗೂ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕೋರಿದರು.

ಬೀದರ್ ವಿಶ್ವವಿದ್ಯಾಲಯದ ನಿವೃತ್ತ ಡೀನರಾದ ಪ್ರೊ. ದೇವದಾಸ್ ತುಮಕುಂಟೆ ಮಾತನಾಡಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಸಾಧನೆಗಳನ್ನು ಭಾರತ ಸ್ವಾತಂತ್ರ್ಯ ಗಳಿಸಿದ ಸಂದರ್ಭದಲ್ಲಿ 500ಕ್ಕೂ ಹೆಚ್ಚು ಸಂಸ್ಥಾನಗಳು ದೇಶದಲ್ಲಿದ್ದವು. ರಾಜರ ಆಳ್ವಿಕೆಯಲ್ಲಿದ್ದ ಈ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ಸೇರ್ಪಡೆಗೊಳಿಸಿ, ಒಂದೇ ಸೂರಿನಡಿ ತರುವುದು ಅಂದಿನ ಬಹುದೊಡ್ಡ ಸವಾಲಾಗಿತ್ತು. ಅದನ್ನು ಪಟೇಲರು ಅತ್ಯಂತ ಚಾಣಾಕ್ಷತನ ಹಾಗೂ ಧೈರ್ಯದಿಂದ ನಿರ್ವಹಿಸಿದರು. ವಿಶೇಷವಾಗಿ ಹೈದರಾಬಾದ್ ಸಂಸ್ಥಾನದ ನಿಜಾಮ ಹಾಗೂ ರಜಾಕಾರರ ಹಿಂಸಾಚಾರದಿಂದ ಈ ಭಾಗದ ಜನರನ್ನು ಮುಕ್ತಗೊಳಿಸಿ, ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ನಿಜವಾದ ಸ್ವಾತಂತ್ರ್ಯ ದೊರೆಯುವಂತೆ ಮಾಡಿದ ಶ್ರೇಯಸ್ಸು ಸರ್ದಾರ್ ಪಟೇಲರಿಗೆ ಸಲ್ಲುತ್ತದೆ. ಮೊದಲ ಗೃಹಮಂತ್ರಿಯಾಗಿ ಪಟೇಲರು ತಳೆದ ದೃಢ ನಾಯಕತ್ವ ಇಂದಿಗೂ ನಮಗೆ ಪ್ರೇರಣೆಯಾಗಿದೆ. ಮಹಾತ್ಮ ಗಾಂಧೀಜಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರಂತೆ ಪಟೇಲರ ಚರಿತ್ರೆಯನ್ನು ಇಂದಿನ ಯುವಪೀಳಿಗೆ ಹಾಗೂ ಶಾಲಾ ಮಕ್ಕಳು ತಪ್ಪದೇ ತಿಳಿದುಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಸಂಸ್ಕೃತಿಕ ಪರಿಷತ್ತು ಸಂಸ್ಥಾಪಕ ಅಧ್ಯಕ್ಷರಾದ ಮನೋಹರ್ ನಾಯಕ್ ಸಿದ್ದಾರ್ಥ್ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಏಕನಾಥ್ ಸುಣಗಾರ, ಸಾಹಿತ್ಯ ಸಂಸ್ಕೃತಿ ಚಿಂತಕರಾದ ರಾಜಕುಮಾರ್ ಪಸಾರೆ, ಜಗನ್ನಾಥ್ ಪಾರ, ಶಿವಶರಣಪ್ಪ ಗಣೇಶಪೂರ, ರಾಜಕುಮಾರ ಹೆಬ್ಬಾಳೆ ಸೇರಿದಂತೆ ವಿವಿಧ ಶಾಲಾ ಕಾಲೇಜಿನ ಮಕ್ಕಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಪ್ರಬಂಧ ಸ್ಪರ್ಧೆ ಕಾರ್ಯಕ್ರಮದಲ್ಲಿ ವಿಜೇತರಾದ ನಾಲ್ಕು ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ವಿವಿಧ 8 ಕಲಾತಂಡಗಳಿಂದ ಸಂಸ್ಕೃತಿಗಳ ಕಾರ್ಯಕ್ರಮ ನಡೆಯಿತು.

ವಿಬಿಜಿ-ರಾಮ್‌ಜಿ ಕಾಮಗಾರಿ ಪರಿಶೀಲನೆ ತ್ಯಾಜ್ಯ ನೀರು ಕೆರೆಗೆ ಹರಿಯದಂತೆ ಸಿಇಓ ಕಟ್ಟುನಿಟ್ಟಿನ ಸೂಚನೆ



ಬಾಗಲಕೋಟೆ ,ಆ.22-

ಬಾಗಲಕೋಟೆ ತಾಲೂಕಿನ ವಿವಿಧ ಗ್ರಾಮ ಪಂಚಾಯತಿಗಳಿಗೆ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ ಗುರುವಾರ ಭೇಟಿ ನೀಡಿ ವಿಬಿಜಿ-ರಾಮ್‌ಜಿ ಯೋಜನೆಯಡಿ ನಡೆಯುತ್ತಿರುವ ಕೆರೆ ಅಭಿವೃದ್ಧಿ ಹಾಗೂ ಸ್ವಚ್ಛತಾ ಕಾಮಗಾರಿಗಳನ್ನು ಪರಿಶೀಲಿಸಿ, ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆನಕಟ್ಟಿ ಗ್ರಾಮ ಪಂಚಾಯತಿಯ ಕೆರೆ ಕಾಮಗಾರಿ ಪರಿಶೀಲಿಸಿದ ವೇಳೆ ಗ್ರಾಮದ ತ್ಯಾಜ್ಯ ನೀರು ಕೆರೆಗೆ ಹರಿಯುತ್ತಿರುವುದನ್ನು ಗಮನಿಸಿದ ಸಿಇಓ ಅವರು ವೈಜ್ಞಾನಿಕ ಚರಂಡಿ ವ್ಯವಸ್ಥೆ ಕಲ್ಪಿಸಿ ತ್ಯಾಜ್ಯ ನೀರು ಕೆರೆಗೆ ಸೇರುವುದನ್ನು ತಕ್ಷಣ ತಡೆಯುವಂತೆ ಪಂಚಾಯತ ಅಭಿವೃದ್ಧಿ ಅಧಿಕಾರಿ ಹಾಗೂ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು. ನಿರ್ಲಕ್ಷ ಕಂಡುಬಂದರೆ ಕ್ರಮಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಕಾರ್ಮಿಕರು ಗಟ್ಟಿಯಾದ ಮಣ್ಣಿನಿಂದ ಕಾಮಗಾರಿ ಕಷ್ಟವಾಗುತ್ತಿದೆ ಎಂದು ತಿಳಿಸಿದಾಗ ಸ್ವತಃ ಸಿಇಓ ಅವರು ಸ್ಥಳದಲ್ಲಿ ಮಣ್ಣು ಅಗೆದು ಪರಿಶೀಲಿಸಿದರು. ಮಣ್ಣು ತೆಗೆಯಲು ಸಾಧ್ಯವಿರುವದನ್ನು ಖಚಿತಪಡಿಸಿದರು. ಮಾಪನದಲ್ಲಿ ಯಾವುದೇ ಸಡಿಲಿಕೆ ನೀಡಲು ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ ಕಾರ್ಮಿಕರ ಕೂಲಿ ವಿಳಂಬವಾಗದಂತೆ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ತಿಳಿಸಿದರು.

ಸಮರ್ಪಕ ಡ್ರಾಯಿಂಗ್, ವಿನ್ಯಾಸ ಹಾಗೂ ತಾಂತ್ರಿಕ ಯೋಜನೆ ಇಲ್ಲದೇ ಕಾಮಗಾರಿ ಕೈಗೊಳ್ಳಲು ಅವಕಾಶ ನೀಡಿದ ತಾಂತ್ರಿಕ ಅಭಿಯಂತರ ಹಾಗೂ ತಾಂತ್ರಿಕ ಸಹಾಯಕ ಅಭಿಯಂತರರಿಗೆ ಶೋಕಾಸ್ ನೋಟಿಸ್ ನೀಡುವಂತೆ ಸೂಚಿಸಿದರು. ಮುಂದಿನ ಕಾಮಗಾರಿಗಳನ್ನು ಅಂದಾಜು, ತಾಂತ್ರಿಕ ಮಾರ್ಗದರ್ಶನ ಹಾಗೂ ಸ್ಥಳ ಪರಿಶೀಲನೆಯ ಬಳಿಕವೇ ಆರಂಭಿಸುವಂತೆ ನಿರ್ದೇಶನ ನೀಡಿದರು. ಕಾರ್ಮಿಕರಿಗೆ ಕೂಲಿ ಹಣವನ್ನು ವಿಳಂಬವಿಲ್ಲದೇ ಪಾವತಿ ಸುವಂಥೆ ಸೂಚಿಸಿದರು.

ಕದಲಿಮಟ್ಟಿ ಗ್ರಾಮ ಪಂಚಾಯತಿಯ ಲವಳೇಶ್ವರ ತಾಂಡಾದಲ್ಲಿ 100ಕ್ಕೂ ಹೆಚ್ಚು ಕಾರ್ಮಿಕರು ಕೆರೆ ಸ್ವಚ್ಛತಾ ಕಾಮಗಾರಿಯಲ್ಲಿ ತೊಡಗಿರುವುದನ್ನು ಪರಿಶೀಲಿಸಿದರು. ಒಳಹರಿವು-ಹೊರಹರಿವು ಚಾನೆಲ್ ವ್ಯವಸ್ಥೆ ಕಲ್ಪಿಸಿ ಕೆರೆಯ ಗಡಿ ಗುರುತಿಸಿದ ಬಳಿಕ ಮುಂದಿನ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದರು.

ಹಿರೇಗುಳಬಾಳದ ಮೂರಮಟ್ಟಿ ಕೆರೆ ಪರಿಶೀಲಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಭೂದಾಖಲೆ ಇಲಾಖೆಯ ಉಪನಿರ್ದೇಶಕರ ಮೂಲಕ ಸರ್ವೆ ಮಾಡಿ ನಿಖರ ಗಡಿ ಗುರುತಿಸುವಂತೆ ಹಾಗೂ ಒತ್ತುವರಿ ತೆರವುಗೊಳಿಸಿ ಕೆರೆಯ ಮೂಲ ಸ್ವರೂಪವನ್ನು ಪುನಃಸ್ಥಾಪಿಸುವಂತೆ ನಿರ್ದೇಶನ ನೀಡಿದರು.

ಭೇಟಿ ಸಮಯದಲ್ಲಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ, ಸಹಾಯಕ ನಿರ್ದೇಶಕ ಸಿದ್ದು ನಕ್ಕರಗುಂದಿ, ಡಿಐಇಸಿಯ ಅಜಯ ಸೂಳಿಕೇರಿ, ತಾಂತ್ರಿಕ ಸಂಯೋಜಕ, ತಾಂತ್ರಿಕ ಸಹಾಯಕ ಅಭಿಯಂತರ, ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಇದ್ದರು.



ನಗರದ ವಿವಿಧ ಹೋಟೆಲ್, ರೆಸ್ಟೋರೆಂಟ್‌ಗಳ ಮೇಲೆ ದಿಢೀರ್ ದಾಳಿ

ಬೀದರ, ಆ.22-

ನಗರದಲ್ಲಿ ಕಳಪೆ ಮತ್ತು ಅಸುರಕ್ಷಿತ ಆಹಾರ ಮಾರಾಟ ಮಾಡುತ್ತಿರುವ ಹೋಟೆಲ್‌ಗಳ ಮೇಲೆ ಸಹಾಯಕ ಆಯುಕ್ತ ಮಹಮ್ಮದ್ ಶಕೀಲ್ ಅವರ ನೇತೃತ್ವದಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳ ತಂಡ ನಗರದ ವಿವಿಧ ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ದಿಢೀರ್ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಈ ವೇಳೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ-2006 ನಿಯಮಗಳನ್ನು ಉಲ್ಲಂಘಿಸಿದ್ದ ಹಲವು ಪ್ರಮುಖ ಹೋಟೆಲ್‌ಗಳಿಗೆ ನೋಟಿಸ್ ಜಾರಿ ಮಾಡಿ, ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಪರಿಶೀಲನೆ ವೇಳೆ ಹೋಟೆಲ್ ಆಮಂತ್ರಣ ಮತ್ತು ನ್ಯೂ ಆಶೀರ್ವಾದ ಹೋಟೆಲ್‌ನಲ್ಲಿ ಅವಧಿ ಮೀರಿದ ಆಹಾರ ಪದಾರ್ಥಗಳು ಹಾಗೂ ಮಿಸ್ ಬ್ರಾಂಡೆಡ್ ವಸ್ತುಗಳು ಪತ್ತೆಯಾಗಿವೆ. ಹೋಟೆಲ್ ಉಡುಪಿ ಕಾರಂತ್, ಪಂಜಾಬಿ ತಡ್ಕಾ, ಮಯೂರ, ರಾಯಲ್ ಅನ್‌ಮೋಲ್ ಮತ್ತು ಖಾನ್ ಚಾಚಾ ಹೋಟೆಲ್‌ಗಳಲ್ಲಿ ಅಡುಗೆ ಮನೆಗಳು ತೀವ್ರ ಅಸ್ವಚ್ಛತೆ ಹಾಗೂ ಆಹಾರದಲ್ಲಿ ಕೃತಕ ಬಣ್ಣ ಮತ್ತು ಕಲಬೆರಕೆ ಮಾಡಿ ಮಾರಾಟ ಮಾಡುತ್ತಿರುವ ಶಂಕೆಯ ಮೇರೆಗೆ ಹೋಟೆಲ್ ಮಯೂರದಿಂದ ಪನೀರ್ ಹಾಗೂ ಕಡಲೆಹಿಟ್ಟು, ಖಾನ್ ಚಾಚಾ ಹೋಟೆಲ್‌ನಿಂದ ಮೆಣಸಿನ ಪುಡಿಯನ್ನು ವಶಪಡಿಸಿಕೊಳ್ಳಲಾಗಿದೆ. ರಾಯಲ್ ಅನ್‌ಮೋಲ್ ಮತ್ತು ಮಂದಿ ಕಿಂಗ್ ಹೋಟೆಲ್‌ಗಳಿಂದಲೂ ಶಂಕಾಸ್ಪದ ಆಹಾರ ಪದಾರ್ಥಗಳ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದ ವಿಶ್ಲೇಷಣೆಗೆ ಕಳುಹಿಸಲಾಗಿದೆ.

ಪಿಡಿಎ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಂಬೆಡೆಡ್ ಎಡ್ಜ್ ಚಾಲೆಂಜ್ 2026 ಹ್ಯಾಕಥಾನ್



ಕಲಬುರಗಿ,ಆ.22-

ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ (ಎಚ್‌ಕೆಇ) ಪಿಡಿಎ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್ (ಇಸಿಇ) ವಿಭಾಗದ ವತಿಯಿಂದ ಬೆಂಗಳೂರಿನ ಇನ್ಸಿ ನಿಯನ್ ಟೆಕ್ನಾಲಜೀಸ್ ಸಹಯೋಗದಲ್ಲಿ ಎಂಬೆಡೆಡ್ ಎಡ್ಜ್ ಚಾಲೆಂಜ್ 2026 ಹ್ಯಾಕಥಾನ್ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಇನ್ಸಿ ನಿಯನ್ ಟೆಕ್ನಾಲಜೀಸ್‌ನ ಹಿರಿಯ ಪ್ರಿನ್ಸಿ ಪಲ್ ಎಂಜಿನಿಯರ್ ಹಾಗೂ ಹಿರಿಯ ನಿರ್ದೇಶಕ ಡಾ. ಪ್ರಕಾಶ್ ಬಾಲಸುಬ್ರಮಣಿಯನ್ ಮತ್ತು ಅಸಿಸ್ಟೆಂಟ್ ಎಂಜಿನಿಯರ್ ಜಗನ್ ಸಿ. ಉದ್ಯಮ ತಜ್ಞರಾಗಿ ಭಾಗವಹಿಸಿದ್ದರು.

ಹ್ಯಾಕಥಾನ್ ಕುರಿತು ಮಾಹಿತಿ ನೀಡಿದ ಡಾ. ಪ್ರಕಾಶ್ ಬಾಲಸುಬ್ರಮಣಿಯನ್, ವಿದ್ಯಾರ್ಥಿಗಳು ನೈಜ ಜಗತ್ತಿನ ಸವಾಲುಗಳನ್ನು ಗುರುತಿಸಿ, ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ರೂಪಿಸಲು ಹ್ಯಾಕಥಾನ್‌ಗಳು ಉತ್ತಮ ವೇದಿಕೆಯಾಗಿವೆ ಎಂದು ಹೇಳಿದರು. ಪ್ರಾಯೋಗಿಕ ಜ್ಞಾನ, ಸಮಸ್ಯೆ ಪರಿಹರಿಸುವ ಸಾಮರ್ಥ್ಯ ಹಾಗೂ ತಾಂತ್ರಿಕ ಕೌಶಲ್ಯಗಳು ಇಂದಿನ ಉದ್ಯೋಗ ಮಾರುಕಟ್ಟೆಯಲ್ಲಿ ಪ್ರಮುಖವಾಗಿದ್ದು, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಉದ್ಯೋಗಾರ್ಹತೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಸಿದ್ದರಾಮ ಆರ್. ಪಾಟೀಲ್, ವಿದ್ಯಾರ್ಥಿಗಳು ಇಂತಹ ತಾಂತ್ರಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ತರಗತಿ ಕೊಠಡಿಯ ಕಲಿಕೆಯ ಜತೆಗೆ ಪ್ರಾಯೋಗಿಕ ಅನುಭವ ಪಡೆಯುವುದು ವೃತ್ತಿಪರ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಉಪಪ್ರಾಂಶುಪಾಲರಾದ (ಶೈಕ್ಷಣಿಕ) ಡಾ. ಎಸ್.ಆರ್. ಹೊಟ್ಟಿ ಹಾಗೂ (ಆಡಳಿತ) ಡಾ. ಭಾರತಿ ಹರಸೂರ ಉಪಸ್ಥಿತರಿದ್ದರು.

ವಿಭಾಗದ ಮುಖ್ಯಸ್ಥ ಡಾ. ನಾಗೇಂದ್ರ ಎಚ್. ಮಾತನಾಡಿ, ಇಸಿಇ ವಿಭಾಗವು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ತಾಂತ್ರಿಕ ಸಾಮರ್ಥ್ಯ ವೃದ್ಧಿಗೆ ನಿರಂತರವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಹಳೆಯ ವಿದ್ಯಾರ್ಥಿಗಳು ಇಂತಹ ಶೈಕ್ಷಣಿಕ ಹಾಗೂ ತಾಂತ್ರಿಕ ಉಪಕ್ರಮಗಳಿಗೆ ಬೆಂಬಲ ನೀಡಲು ಆಸಕ್ತಿ ತೋರುತ್ತಿರುವುದು ಸಂತಸದ ಸಂಗತಿ ಎಂದರು.

ಕಾರ್ಯಕ್ರಮದ ಸಂಯೋಜಕರಾದ ಡಾ. ಶ್ರೀಧರ ಕೆ., ಡಾ. ಜೂಹಿ ನಿಶಾತ್ ಅನ್ಸಾರಿ, ಪ್ರೊ. ಪಂಕಜ್ ಮಾಹೂಕರ್ ಪ್ರೊ. ಪ್ರತೀಕ್ ಶಂಕರ್ ಹಾಗೂ ಪ್ರೊ. ಜ್ಯೋತಿ ಪಾಟೀಲ್ ಅವರು ಬೆಂಗಳೂರಿನ ಇನ್ಸಿ ನಿಯನ್ ಟೆಕ್ನಾಲಜೀಸ್‌ನಲ್ಲಿ ಎಂಬೆಡೆಡ್ ಸಿಸ್ಟಮ್ಸ್ ಕುರಿತು ಒಂದು ವಾರದ ತರಬೇತಿ ಪೂರ್ಣಗೊಳಿಸಿದ್ದು, ಇದೀಗ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಉಪ ತರಬೇತಿ ಮತ್ತು ಉದ್ಯೋಗಾಧಿಕಾರಿ ಡಾ. ನಾಗೇಶ್ ಸಾಲಿಮಠ ಉಪಸ್ಥಿತರಿದ್ದರು. ಪ್ರೊ. ಮೀನಾಕ್ಷಿ ಪಾಟೀಲ್, ಪ್ರೊ. ವೀರಣ್ಣ ಗುಗ್ವಾಡ್, ಪ್ರೊ. ರಾಜಕುಮಾರ್ ಬೈನೂರ್, ಪ್ರೊ. ಸಿ.ಡಿ. ಬೋಗಲೆ, ಪ್ರೊ. ವೀಣಾ ಸರಾಫ್, ಡಾ. ರಾಕೇಶ್ ಹುಡೇದ್, ಪ್ರೊ. ಓಂಕಾರ್ ಯಕ್ಲಲ್, ಪ್ರೊ. ಗಾಯತ್ರಿ ಮಠ ಹಾಗೂ ಪ್ರೊ. ರೇಣುಕಾ ಹಟ್ಟಿ ಸೇರಿದಂತೆ ಹಲವು ಅಧ್ಯಾಪಕರು ಭಾಗವಹಿಸಿದ್ದರು.

ಅಂತರರಾಷ್ಟ್ರೀಯ ವ್ಯಾಪಾರ ಮೇಳ : ಘಟಕ ಸ್ಥಾಪನೆಗೆ ಅರ್ಜಿ

ಬಾಗಲಕೋಟೆ ,ಆ.22-

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು ನವೆಂಬರ 14 ರಿಂದ 27 ವರೆಗೆ ನವದೆಹಲಿಯ ಭಾರತ್ ಮಂಡಪಂನಲ್ಲಿ 45ನೇ ಆವೃತ್ತಿಯ ಭಾರತ ಅಂತರಾಷ್ಟ್ರೀಯ ವ್ಯಾಪಾರ ಮೇಳ-

2026ನ್ನು ಆಯೋಜಿಸಲಾಗುತ್ತಿದೆ. ಸದರಿ ವ್ಯಾಪಾರ ಮೇಳದಲ್ಲಿ ಕುಶಲಕರ್ಮಿಗಳು ಹಾಗೂ ಎಂ.ಎಸ್.ಎಂ.ಇ. ಘಟಕಗಳು ಭಾಗವಹಿಸಿ, ಅವರು ಉತ್ಪಾದಿಸುವ ವಿನೂತನ ಉತ್ಪನ್ನಗಳನ್ನು ಮಾರಾಟ ಮಾಡಬಹುದಾದ ಉತ್ತಮ ವೇದಿಕೆಯಾಗಿರುತ್ತದೆ.

ನಿಮ್ಮೂರು ಸುದ್ದಿ

ಸಂಪಾದಕೀಯ



ನಕಲಿ ಔಷಧಿ ಹಾವಳಿ; ದಾಳಿಯಷ್ಟೇ ಸಾಲದು, ಸರ್ಕಾರ ಕಠಿಣ ಕ್ರಮ ಜರುಗಿಸಲಿ

ಭಾರತದ ಆರೋಗ್ಯ ಕ್ಷೇತ್ರ ಅನಾರೋಗ್ಯಪೀಡಿತವಾಗಿ ದಶಕಗಳೇ ಸಂದಿವೆ. ಅತಿ ಹೆಚ್ಚು ಜನಸಂಖ್ಯೆ ಇರುವ ಈ ದೇಶ ವಿದೇಶಿ ಮೆಡಿಕಲ್ ಮಾಫಿಯಾಗಳ ದೊಡ್ಡ ಮಾರುಕಟ್ಟೆ. ಒಂದು ಕಡೆ ಔಷಧಿ ಮಾಫಿಯಾ, ಮತ್ತೊಂದು ಕಡೆ ನಕಲಿ ವೈದ್ಯರು, ಸಾಲದೆಂಬಂತೆ ನಕಲಿ ಔಷಧಿ ದಂಧೆ. ಈ ಮಧ್ಯೆ ಜನರ ಆರೋಗ್ಯದ ಮೇಲೆ ಕಾಳಜಿ ಯಾರಿಗೂ ಇಲ್ಲ.

ಬಿಡದಿಯಲ್ಲಿ ನಕಲಿ ಔಷಧಿಗಳಿಗೆ ಬಹುರಾಷ್ಟ್ರೀಯ ಕಂಪನಿಗಳ ಲೇಬಲ್ ಬಳಸಿ ಮರುಪ್ಯಾಕ್ ಮಾಡುತ್ತಿದ್ದ ಅಡ್ಡೆಯ ಮೇಲೆ ಪೊಲೀಸರು ಹಾಗೂ ಆಹಾರ ಇಲಾಖೆ ಅಧಿಕಾರಿಗಳು ಜಂಟಿಯಾಗಿ ದಾಳಿ ನಡೆಸಿ, ₹4.91 ಕೋಟಿ ಮೌಲ್ಯದ ಔಷಧಿಗಳು, ಬಾಟಲಿಗಳು, ಲೇಬಲ್‌ಗಳು, ಪ್ಯಾಕೇಜಿಂಗ್ ಸಾಮಗ್ರಿ ಮತ್ತು ಉಪಕರಣಗಳನ್ನು ವಶಪಡಿಸಿಕೊಂಡಿದ್ದಾರೆ. ಇದು ನಿಜಕ್ಕೂ ಆಘಾತಕಾರಿ ಸುದ್ದಿ. ನಕಲಿ ಔಷಧಿ ತಯಾರಿಕೆಯೇ ಅಪಾಯಕಾರಿ; ಅದಕ್ಕೆ ಬಹುರಾಷ್ಟ್ರೀಯ ಕಂಪನಿಯ ಲೇಬಲ್ ಅಂಟಿಸಿ ಜನರನ್ನು ಯಾಮಾರಿಸಿ ಹಣ, ಆರೋಗ್ಯ ಎರಡನ್ನೂ ದೋಚುವ ನೀಚರ ವಿರುದ್ಧ ಕಠಿಣ ಕ್ರಮ ಜರುಗಿಸುವ ಕೆಲಸ ತುರ್ತಾಗಿ ಆಗಬೇಕಿದೆ. ಯಥಾ ಪ್ರಕಾರ ಜಾಮೀನು, ಮೇಲ್ಮನವಿ, ಖುಲಾಸೆಯಂತಹ ಅವಕಾಶಗಳು ಈ ದುಷ್ಟರಿಗೆ ಸಿಗದಂತೆ ಮಾಡುವುದು ಸರ್ಕಾರದ ಆದ್ಯತೆಯಾಗಬೇಕು. ಪಾತಕಿಗಳ ಪಾಲಿಗೆ ಕಾನೂನಿನ ಕೈಗಳು ಬಹು ಉದ್ದ ಎಂಬ ಮಾತನ್ನು ನಡೆಸಿಕೊಡಬೇಕು.

ಆರೋಪಿ ಬಿಡದಿಯ ಸಿ.ಕೆ.ತಾಂಡ್ಯ ಸಮೀಪದ ಫಾರ್ಮ್‌ಹೌಸ್ ಲೀಸಿಗೆ ಪಡೆದು ಕಡಿಮೆ ಬೆಲೆಯುಳ್ಳ ಔಷಧಿಗಳನ್ನು ತೆಲಂಗಾಣ ಮತ್ತು ಹಿಮಾಚಲ ಪ್ರದೇಶದಿಂದ ಆಮದು ಮಾಡಿಕೊಂಡು ಅದಕ್ಕೆ ಬೇರೆ ಲೇಬಲ್ ಅಂಟಿಸುತ್ತಿದ್ದ. ಮತ್ತು ಸೇರಿದಂತೆ ಹಲವು ಕಂಪನಿಗಳ ಲೇಬಲ್ ಬಳಸಿ ಕಳೆದ ಒಂದು ವರ್ಷದಿಂದ ಈ ದಂಧೆ ನಡೆಸುತ್ತಿದ್ದನಂತೆ! ಇದುವರೆಗೆ ಅದೆಷ್ಟು ಜನ ಈ ನಕಲಿ ಔಷಧಿ ಪಡೆದು ಆರೋಗ್ಯ, ಹಣ ಎರಡನ್ನೂ ಕಳೆದುಕೊಂಡಿದ್ದಾರೆ ಎಂಬ ಲೆಕ್ಕವಿದೆಯೇ? ಆರೋಗ್ಯ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯಲೋಪ ಎದ್ದು ಕಾಣುತ್ತಿದೆ. ಹಣದ ವ್ಯಾಮೋಹ, ಧನದಾಹ ನೀಗಿಸಲು ಅಮಾಯಕರ ಜೀವ ಬಲಿ ಪಡೆಯುವ ಇಂತಹ ನೀಚರಿಗೆ ಕಠಿಣ ಶಿಕ್ಷೆಯಾಗಬೇಕು.

ಭಾರತದ ಆರೋಗ್ಯ ಕ್ಷೇತ್ರವನ್ನು ಅನಾರೋಗ್ಯ ಬಾಧಿಸಿ ದಶಕಗಳೇ ಸಂದಿವೆ. ಜಗತ್ತಿನಲ್ಲೇ ಅತಿ ಹೆಚ್ಚು ಜನಸಂಖ್ಯೆ ಇರುವ ಈ ದೇಶ ವಿದೇಶಿ ಮೆಡಿಕಲ್ ಮಾಫಿಯಾಗಳ ದೊಡ್ಡ ಮಾರುಕಟ್ಟೆ. ಒಂದು ಕಡೆ ಔಷಧಿ ಮಾಫಿಯಾ, ಮತ್ತೊಂದು ಕಡೆ ನಕಲಿ ವೈದ್ಯರು, ಸಾಲದು ಎಂಬಂತೆ ನಕಲಿ ಔಷಧಿ ದಂಧೆ; ಈ ಮಧ್ಯೆ ಜನರ ಆರೋಗ್ಯದ ಮೇಲೆ ಕಾಳಜಿ ಯಾರಿಗೂ ಇಲ್ಲ. ಲಸಿಕೆ ಪಡೆದು ನವಜಾತ ಶಿಶುಗಳು ಮರಣ ಹೊಂದಿರುವುದು, ಹೆರಿಗೆಯ ನಂತರ ನೀಡುವ ಔಷಧಿಯ ಅಡ್ಡಪರಿಣಾಮವಾಗಿ ಬಾಣಂತಿಯರ ಸಾವು ಆಗಾಗ ಸದ್ದು ಸುದ್ದಿಯಾಗುತ್ತಿರುವುದನ್ನು ಗಮನಿಸಿದ್ದೇವೆ. ಇವೆಲ್ಲ ಮೆಡಿಕಲ್ ಮಾಫಿಯಾದತ್ತಲೇ ಬೆರಳು ತೋರುತ್ತಿವೆ. ಆದರೆ, ಇಂತಹ ಮಾಫಿಯಾಗಳು ಅಧಿಕಾರಸ್ಥರು, ರಾಜಕಾರಣಿಗಳ ಬೆಂಬಲವಿಲ್ಲದೇ ನಡೆಯಲು ಸಾಧ್ಯವೇ ಇಲ್ಲ. ಒಂದು ಸರ್ಕಾರ ಕಪ್ಪುಪಟ್ಟಿಗೆ ಹಾಕಿದ ಕಂಪನಿಗೆ ಮತ್ತೊಂದು ಸರ್ಕಾರ ಕಂಪನಿ ರತ್ನಗಂಬಳಿ ಹಾಸಿ ಗುತ್ತಿಗೆ ನೀಡಿರುವ ಪ್ರಕರಣಗಳ ಉದಾಹರಣೆ ನಮ್ಮ ಮುಂದಿದೆ. ಅಂಗನವಾಡಿ ಮಕ್ಕಳಿಗೆ ಪೂರೈಕೆ ಮಾಡುವ ಆಹಾರ, ಬಿಸಿಯೂಟ, ಅನ್ನಭಾಗ್ಯದಲ್ಲಿ ನೀಡುವ ಅಕ್ಕಿ ಬೇಳೆ ಹೀಗೆ ಮನುಷ್ಯನ ಆರೋಗ್ಯಕ್ಕೆ ಬೇಕಿರುವ ಎಲ್ಲವೂ ಕಲಬೆರಕೆ ಅಥವಾ ಕಳಪೆ. ಇದು ಇಂದಿನ ಸಮಸ್ಯೆ ಅಲ್ಲ, ಮತ್ತು ಮುಗಿಯುವ ಸಮಸ್ಯೆಯೂ ಅಲ್ಲ. ಎಲ್ಲವೂ ಸರ್ಕಾರ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿ. ರಾಜಕಾರಣಿಗಳ ಸ್ವಜನ ಪಕ್ಷಪಾತ, ಸ್ವಂತ ಲಾಭಕ್ಕಾಗಿ ಬೇನಾಮಿ ಹೆಸರಿನಲ್ಲಿ ಕಂಪನಿಗಳನ್ನು ಸ್ಥಾಪಿಸಿ ಸರ್ಕಾರದ ಗುತ್ತಿಗೆಗಳನ್ನು ಪಡೆಯುತ್ತಿರುವುದು. ಇವೆಲ್ಲದರ ಪರಿಣಾಮವಾಗಿ ಇಡೀ ಸಮಾಜದ ಸ್ವಾಸ್ಥ್ಯ ಅಪಾಯದಲ್ಲಿದೆ.


ಖಾಸಗಿ ಆಸ್ಪತ್ರೆಗಳು ಜನರ ರಕ್ತ ಹೀರುವ, ಹಣ ಸುಲಿಗೆಯ ಕೇಂದ್ರಗಳಾಗಿವೆ. ಸರ್ಕಾರಿ ಆಸ್ಪತ್ರೆಗಳಲ್ಲೂ ಬಡ ಮತ್ತು ಮಧ್ಯಮ ವರ್ಗದ ಜನರ ಜೀವ ಹಿಂಡುವ ಕಮಿಷನ್, ಲಂಚ ತಾಂಡವವಾಡುತ್ತಿದೆ. ಸಾಮಾನ್ಯ ಕುಟುಂಬಗಳಲ್ಲಿ ಒಬ್ಬ ವ್ಯಕ್ತಿಗೆ ಗಂಭೀರ ಆರೋಗ್ಯ ಸಮಸ್ಯೆ ಉಂಟಾದರೆ ಇಡೀ ಕುಟುಂಬ ಆರ್ಥಿಕ ಸಮಸ್ಯೆಗೆ ಸಿಲುಕುತ್ತದೆ. ಸರ್ಕಾರದ ಎಲ್ಲಾ ಉಚಿತ ಚಿಕಿತ್ಸೆ , ಸೌಲಭ್ಯಗಳಾಚೆಗೂ ಖಾಸಗಿ ಆಸ್ಪತ್ರೆಗಳ ಮೊರೆ ಹೋಗುವ ಸಂದರ್ಭ ಬಂದರೆ ಮುಗಿದೇ ಹೋಯ್ತು. ನಾವು ಉಣ್ಣುವ ಪ್ರತಿಯೊಂದು ಆಹಾರವೂ ಕಲಬೆರಕೆ, ವಿಷಯುಕ್ತವಾಗುತ್ತಿದೆ. ನಾವು ಸೇವಿಸುವ ಕಲಬೆರಕೆ ಆಹಾರಗಳೇ ಆರೋಗ್ಯ ಸಮಸ್ಯೆಯ ಮೂಲವಾಗುತ್ತಿದೆ. ಬೊಜ್ಜು, ಖಿನ್ನತೆ, ಮಧುಮೇಹ, ರಕ್ತದೊತ್ತಡದಂತಹ ಸಮಸ್ಯೆಗಳು ಯುವಜನರನ್ನೂ ಬಾಧಿಸುತ್ತಿವೆ. ಊಟ, ವಸತಿ, ಶಿಕ್ಷಣದ ಜೊತೆಗೆ ಆಸ್ಪತ್ರೆ ಖರ್ಚಿಗೆಂದು ಹಣ ಕೂಡಿಡುವ ಅನಿವಾರ್ಯತೆ ಬಂದೊದಗಿದೆ. ಕೂಲಿ ಕಾರ್ಮಿಕ ಕುಟುಂಬಗಳು ಆರೋಗ್ಯ ವಿಮೆ ಮಾಡುವುದು ಅಸಾಧ್ಯ. ಜನರಿಂದ ಆಯ್ಕೆಯಾಗುವ ಸರ್ಕಾರಗಳು, ಜನಪ್ರತಿನಿಧಿಗಳು ಜನರ ಆರೋಗ್ಯದ ಬಗ್ಗೆ ಯೋಚಿಸದಿರುವುದು ದುರಂತ.

ಯು ಟಿ ಖಾದರ್ ಅವರು ನೂತನ ಆರೋಗ್ಯ ಸಚಿವರಾದ ನಂತರ ಬೆಂಗಳೂರಿನ ಹೋಟೆಲು, ಕ್ಯಾಂಟಿನ್, ರೈಲ್ವೆ ಆಹಾರ ಕೇಂದ್ರಗಳ ಮೇಲೆ ದಾಳಿ ನಡೆಸಿ ಕಳಪೆ ಮತ್ತು ಅವಧಿ ಮೀರಿದ ಸಂಸ್ಕರಿತ ಆಹಾರ ಪತ್ತೆ ಹಚ್ಚಿ ಸುದ್ದಿಯಾಗಿದ್ದಾರೆ. ಇದು ನಿರಂತರವಾಗಿ ನಡೆಯಬೇಕಿರುವ ಕಾರ್ಯಾಚರಣೆ. ಮತ್ತೆ ರಾಜ್ಯದ ಎಲ್ಲ ಜಿಲ್ಲೆ, ತಾಲ್ಲೂಕು ಕೇಂದ್ರಗಳಲ್ಲೂ ಸ್ಥಳೀಯ ಫುಡ್ ಇನ್‌ಸ್ಪೆಕ್ಟರ್‌ಗಳು ಮಾಡಬೇಕಿರುವ ಕರ್ತವ್ಯ. ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸಿದರೆ, ನಿಸ್ವಾರ್ಥವಾಗಿ ಕೆಲಸ ಮಾಡಿದರೆ ಇಂತಹ ಅಧ್ವಾನಗಳು ನಡೆಯಲು ಸಾಧ್ಯವೇ ಇಲ್ಲ. ಬಹುತೇಕ ಪ್ರಕರಣಗಳಲ್ಲಿ ಕೇಸು ದಾಖಲಾದ ನಂತರ ಏನಾಯ್ತು ಎಂಬುದು ಗೊತ್ತೇ ಆಗುವುದಿಲ್ಲ. ಹಣ ಪಡೆದು ಅಧಿಕಾರಿಗಳು ದುರುಳರ ಜೊತೆಗೆ ಶಾಮೀಲಾಗಿ ಮುಚ್ಚಿ ಹಾಕುತ್ತಾರೆ ಎಂಬುದು ಕೇವಲ ಆರೋಪವಲ್ಲ. ಬಹುತೇಕ ಕಣ್ಣ ಮುಂದೆಯೇ ನಡೆಯುತ್ತಿರುವ ಸತ್ಯ. ಸಮಸ್ಯೆಯ ಮೂಲಕ್ಕೆ ಮದ್ದು ಅರೆಯುವ ಕೆಲಸವಾಗದೇ ಔಷಧ ಮಾಫಿಯಾಕ್ಕೆ ಕಡಿವಾಣ ಹಾಕುವುದು ಅಸಾಧ್ಯ. ಇದು ರಾಜ್ಯವೊಂದರ ಸಮಸ್ಯೆಯಲ್ಲ, ಇಡೀ ದೇಶವನ್ನು ಮಾಫಿಯಾಗಳೇ ನಡೆಸುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇದನ್ನು ಗಂಭೀರ ಸಮಸ್ಯೆಯಾಗಿ ಪರಿಗಣಿಸಬೇಕಿದೆ.

ದಾಳಿಯ ವಿವರಗಳನ್ನು ನೀಡಿದ ಪ್ರಕಾರವೇ, ತಪ್ಪು ಮಾಡಿರುವವರನ್ನು ಕಾನೂನಿನ ಕುಣಿಕೆಗೆ ಸಿಕ್ಕಿಸಿ ಶಿಕ್ಷೆಗೆ ಗುರಿಪಡಿಸಿದ ಲೆಕ್ಕವನ್ನೂ ಸಚಿವರು ಮುಂದೊಮ್ಮೆ ಸಾರ್ವಜನಿಕರಿಗೆ ನೀಡುವಂತಾಗಲಿ.

ಶಾಸಕರು ಹಾಗೂ ಕೆ.ಎಂ.ಸಿ. ವೈದ್ಯರು ನೀಡಿದ ಪ್ರಮಾಣ ಪತ್ರವನ್ನು ಬಾಬರ್ ಬವಾಜಿ ವಿತರಣೆ

ತಡಸ ಸವಣೂರ ಕ್ಷೇತ್ರದ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀಯಾಸೀರ್‌ಅಹ್ಮದ್‌ಖಾನ್‌ಪಠಾಣ ರವರ ಹುಟ್ಟು ಹಬ್ಬದ ಪ್ರಯುಕ್ತ ತಡಸ ಜಿ ಪಂ ವ್ಯಾಪ್ತಿಯಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ಶ್ಯಾಡಂಬಿ ಗ್ರಾಮದ ಯುವ ಕಾಂಗ್ರೆಸ್ ಮುಖಂಡ ದ್ಯಾಮಣ್ಣಪಕಾಳೆ ರವರು ತಮ್ಮ ಸ್ನೇಹಿತರನ್ನು ಕರೆಯಿಸಿ ರಕ್ತದಾನ ಶಿಬಿರದಲ್ಲಿ ಭಾಗವಹಿಸಿ ರಕ್ತದಾನ ಮಾಡಿಸಿದರು



ರಕ್ತದಾನ ಮಾಡಿದ ಸ್ನೇಹಿತರಿಗೆ ಶಿಗ್ಗಾಂವ ತಾಲೂಕ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾದ ಶ್ರೀಬಾಬರಇಬೊವಾಜಿ ರವರು ಶಾಸಕರು ನೀಡಿದ ಹಾಗೂ ಕೆ ಎಮ್ ಸಿ ಯವರು ನೀಡಿದ ಪ್ರಮಾಣ ಪತ್ರ ರಕ್ತದಾನಿಗಳಿಗೆ ವಿತರಣೆ ಮಾಡಿದರು ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಶ್ರೀಫರೀದಖಾನ ಐರಣಿ ಇನ್ನು ಅನೇಕ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಈರುಳ್ಳಿ ದುಬಾರಿ: ಬೆಳೆ ಕಡಿಮೆಯಾದಾಗ ಗ್ರಾಹಕರಿಗೆ ಬರೆ, ಉತ್ತಮ ಬೆಳೆ ಬಂದಾಗ ರೈತರಿಗೆ ಹೊರೆ

ಸ್ಥಳೀಯ ಹೊಸ ಈರುಳ್ಳಿ ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ಆವಕವಾಗುವವರೆಗೂ ಗ್ರಾಹಕರಿಗೆ ತಕ್ಷಣದ ದರ ಇಳಿಕೆ ನಿರೀಕ್ಷಿಸುವುದು ಕಷ್ಟ. ಆದರೆ ಸೆಪ್ಟೆಂಬರ್ ನಂತರ ಹೊಸ ಬೆಳೆ ಬಂದಾಗ ಮಾರುಕಟ್ಟೆ ಸ್ಥಿರಗೊಳ್ಳಬಹುದು. ಭಾರತದ ಈರುಳ್ಳಿ ಮಾರುಕಟ್ಟೆಯಲ್ಲಿ ಗ್ರಾಹಕ ದುಬಾರಿಯಾಗಿದೆ ಎಂದಾಗ, ರೈತ ನನಗೆ ಸೂಕ್ತ ಬೆಲೆ ಸಿಕ್ಕಿಲ್ಲ ಎನ್ನುವುದು ಸಹಜವೆಂಬಂತಾಗಿದೆ. ಹಾಗಾಗಿ ಈ ಇಬ್ಬರ ನಡುವಿರುವ ಸಾಗಣೆ, ನಷ್ಟ, ಸಂಗ್ರಹಣಾ ಅಸಮಾನತೆ ಮತ್ತು ಮಧ್ಯವರ್ತಿಗಳ ಸರಪಳಿಯನ್ನು ಸರಿಪಡಿಸುವುದು ಅತ್ಯಗತ್ಯ.

ಅಡುಗೆಮನೆಯ ಅವಿಭಾಜ್ಯ ಅಂಗವೂ, ಭಾರತೀಯ ಆಹಾರ ಸಂಸ್ಕೃತಿಯ ಪ್ರಮುಖ ಭಾಗವೂ ಆಗಿರುವ ಈರುಳ್ಳಿ ದುಬಾರಿಯಾಗುತ್ತಿದ್ದು, ಕಳೆದೊಂದು ತಿಂಗಳಿನಿಂದ ಗ್ರಾಹಕರ ಕಣ್ಣಲ್ಲಿ ನೀರು ತರಿಸುತ್ತಿದೆ. ಒಂದು ತಿಂಗಳ ಹಿಂದೆ ಮಾರುಕಟ್ಟೆಯಲ್ಲಿ ತುಸು ಸಮಾಧಾನಕರವಾಗಿದ್ದ ಈರುಳ್ಳಿ ದರ ಈಗ ನಿಧಾನವಾಗಿ ಏರುಮುಖವಾಗುತ್ತಿದೆ.

ದೊಡ್ಡ ಪ್ರಮಾಣದ ದರ ಏರಿಕೆಯಾಗಿಲ್ಲವಾದರೂ, ಕಳೆದ ಕೆಲವು ವಾರಗಳಲ್ಲಿ ಕಂಡಿರುವ ಏರಿಕೆ ಮುಂದಿನ ದಿನಗಳ ಬಗ್ಗೆ ಆತಂಕ ಮೂಡಿಸಿದೆ. ವಿಶೇಷವೆಂದರೆ, ಗ್ರಾಹಕರು ಒಂದು ಕೆಜಿ ಈರುಳ್ಳಿಗೆ ಹೆಚ್ಚು ಹಣ ತೆರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದರೂ, ಈ ದರ ಏರಿಕೆಯ ಲಾಭ ಸ್ಥಳೀಯ ಈರುಳ್ಳಿ ಬೆಳೆಗಾರರ ಕೈಗೆ ಸೇರುತ್ತಿಲ್ಲ. ಪ್ರಸ್ತುತ ಮಾರುಕಟ್ಟೆಯ ಈ ಸ್ಥಿತಿ, ಭಾರತದ ಕೃಷಿ ಕ್ಷೇತ್ರದಲ್ಲಿ ದಶಕಗಳಿಂದ ನೆಲೆಸಿರುವ ಮೂಲಭೂತ ವೈರುಧ್ಯ ಮತ್ತು ಮಾರುಕಟ್ಟೆ ಅಸಮಾನತೆಯನ್ನು ಮತ್ತೊಮ್ಮೆ ಬಯಲಿಗೆಳೆದಿದೆ.



ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆಯ ಬೆಲೆ ನಿಗಾ ವ್ಯವಸ್ಥೆಯ ಅಂಕಿಅಂಶಗಳನ್ನು ಗಮನಿಸಿದರೆ, ಜುಲೈ ಮಧ್ಯಭಾಗದಲ್ಲಿ ದೇಶದ ಸರಾಸರಿ ಚಿಲ್ಲರೆ ಈರುಳ್ಳಿ ದರ ಕೆ.ಜಿಗೆ ₹34.71 ಇತ್ತು. ಆಗಸ್ಟ್ ಮಧ್ಯದ ವೇಳೆಗೆ ಅದು ₹39.48ಕ್ಕೆ ಏರಿಕೆಯಾಗಿದೆ. ಅಂದರೆ ಕೇವಲ ಒಂದು ತಿಂಗಳಲ್ಲಿ ಶೇ 13.74ರಷ್ಟು ಏರಿಕೆ ದಾಖಲಾಗಿದೆ.

ಬೆಂಗಳೂರಿನ ಹಲವು ಮಾರುಕಟ್ಟೆಗಳಲ್ಲಿ ದೊಡ್ಡ ಈರುಳ್ಳಿ ಚಿಲ್ಲರೆ ದರ ಕೆಜಿಗೆ ₹42ರಿಂದ ₹49ರ ವ್ಯಾಪ್ತಿಯಲ್ಲಿ ಮಾರಾಟವಾಗುತ್ತಿದ್ದರೆ, ಕರ್ನಾಟಕದ ವಿವಿಧ ಎಪಿಎಂಸಿಗಳಲ್ಲಿ ಸಗಟು ದರ ಕೆ.ಜಿಗೆ ₹12ರಿಂದ ₹34ರವರೆಗೆ ವ್ಯತ್ಯಾಸವಿತ್ತು.

ಭಾರತದ ಈರುಳ್ಳಿ ಮಾರುಕಟ್ಟೆಯ ಚಕ್ರವನ್ನು ಅರ್ಥೈಸಿಕೊಳ್ಳಲು ಬೆಳೆ ಬೆಳೆಯುವ ಋತುಮಾನಗಳನ್ನು ಗಮನಿಸುವುದಾದರೆ, ದೇಶದಲ್ಲಿ ಹಿಂಗಾರು, ಮುಂಗಾರು ಮತ್ತು ತಡ ಮುಂಗಾರು ಹಂಗಾಮುಗಳಲ್ಲಿ ಈರುಳ್ಳಿ ಬೆಳೆಯಲಾಗುತ್ತದೆ. ಎಲ್ ನಿನೋ ಪ್ರಭಾವದಿಂದಾಗಿ ಮಾರ್ಚ್-ಏಪ್ರಿಲ್‌ನಲ್ಲಿ ಮಳೆ ಕೈಕೊಟ್ಟ ಕಾರಣ ರಾಜ್ಯದಲ್ಲಿ ಸಮರ್ಪಕವಾಗಿ ಈರುಳ್ಳಿ ಬಿತ್ತನೆಯಾಗಿಲ್ಲ. ಚಿತ್ರದುರ್ಗ ಮತ್ತು ಚಳ್ಳಕೆರೆ ಪ್ರದೇಶಗಳಲ್ಲಿ ಮುಂಗಾರು ಈರುಳ್ಳಿ ಬಿತ್ತನೆ ಸಾಮಾನ್ಯ ಪ್ರಮಾಣದ ಶೇ 60ರಷ್ಟು ಮಾತ್ರವಾಗಿದ್ದು, ಮಹಾರಾಷ್ಟ್ರದ ನಾಸಿಕ್ ಭಾಗದಲ್ಲೂ ಬಿತ್ತನೆ 15 ದಿನ ತಡವಾಗಿದೆ. ಬಿತ್ತನೆ ಮತ್ತು ಬೆಳೆ ಬೆಳವಣಿಗೆ ವಿಳಂಬವಾದ್ದರಿಂದ ದಕ್ಷಿಣ ಭಾರತದ ಹೊಸ ಈರುಳ್ಳಿ ಮಾರುಕಟ್ಟೆಗೆ ಪ್ರವೇಶಿಸುವುದು ತಡವಾಗಿದ್ದು, ಹಳೆಯ ಸಂಗ್ರಹಿತ ಈರುಳ್ಳಿ ಮೇಲಿನ ಬೇಡಿಕೆ ಹೆಚ್ಚಾಗಿ ಬೆಲೆ ಏರಿಕೆಗೆ ಕಾರಣವಾಗಿದೆ.

ದೇಶದ ಈರುಳ್ಳಿ ಬೆಲೆಯ ದಿಕ್ಕನ್ನು ನಿರ್ಧರಿಸುವ ಪ್ರಮುಖ ಮಾರುಕಟ್ಟೆಗಳಲ್ಲಿ ಮಹಾರಾಷ್ಟ್ರದ ಲಾಸಲ್‌ಗಾಂವ್ ಎಪಿಎಂಸಿ ಒಂದು. ಅದೇ ಮಾರುಕಟ್ಟೆಗೆ ಬರುತ್ತಿರುವ ಈರುಳ್ಳಿ ಪ್ರಮಾಣದ ನಿತ್ಯದ ಆವಕವು 15 ಸಾವಿರ ಕ್ವಿಂಟಲ್‌ನಿಂದ ಸುಮಾರು 8 ಸಾವಿರ ಕ್ವಿಂಟಲ್‌ಗೆ ಕುಸಿದಿದ್ದೇ ಇತ್ತೀಚಿನ ಬೆಲೆ ಏರಿಕೆಗೆ ಮುಖ್ಯ ಚಾಲಕ ಶಕ್ತಿಯಾಗಿದೆ. ಮಹಾರಾಷ್ಟ್ರದಲ್ಲಿ ಸಗಟು ದರ ಹೆಚ್ಚಾದಾಗ ಅದರ ಬಿಸಿ ಸಹಜವಾಗಿಯೇ ಕರ್ನಾಟಕ ಸೇರಿದಂತೆ ಇತರ ರಾಜ್ಯಗಳ ಮಾರುಕಟ್ಟೆಗಳಿಗೂ ತಟ್ಟುತ್ತದೆ.

ಆಗಸ್ಟ್ 5ರಂದು ಸರಾಸರಿ ಸಗಟು ದರ ಕೆ.ಜಿಗೆ ₹21.50ರಷ್ಟಿದ್ದರೆ, ಆಗಸ್ಟ್ 12ರ ವೇಳೆಗೆ ಅದು ₹27ಕ್ಕೆ ತಲುಪಿತ್ತು. ಒಂದೇ ವಾರದಲ್ಲಿ ಸುಮಾರು ಶೇ.25ರಷ್ಟು ಏರಿಕೆಯಾಗಿತ್ತು. ಅದರ ನಂತರವೂ ಏರಿಕೆ ಮುಂದುವರಿದಿದ್ದು, ಆಗಸ್ಟ್ 14ರಂದು ಕ್ವಿಂಟಲ್‌ಗೆ ₹2,800 ಇದ್ದ ಸರಾಸರಿ ಸಗಟು ದರ ಆಗಸ್ಟ್ 18ಕ್ಕೆ ಸುಮಾರು ₹3,700ಕ್ಕೆ ಏರಿತು. ಮಾರುಕಟ್ಟೆಯ ನಿತ್ಯದ ಈರುಳ್ಳಿ ಆಗಮನ ಎರಡು-ಮೂರು ವಾರಗಳ ಹಿಂದೆ ಸುಮಾರು 15 ಸಾವಿರ ಕ್ವಿಂಟಲ್ ಇದ್ದದ್ದು, ಇತ್ತೀಚೆಗೆ ಸುಮಾರು 8 ಸಾವಿರ ಕ್ವಿಂಟಲ್‌ಗೆ ಇಳಿದಿರುವುದೇ ದರ ಏರಿಕೆಯ ಪ್ರಮುಖ ಕಾರಣ ಎಂಬುದು ಎಪಿಎಂಸಿ ಅಧಿಕಾರಿಗಳ ಅಭಿಪ್ರಾಯವಾಗಿದೆ.

ಒಂದೆಡೆ ನಗರದ ಗ್ರಾಹಕ ಕೆ.ಜಿಗೆ ₹45ಕ್ಕೂ ಹೆಚ್ಚು ಹಣ ಪಾವತಿಸುತ್ತಿದ್ದರೆ, ಬೆಳೆದ ರೈತನಿಗೆ ಈ ಹಣ ತಲುಪದಿರಲು ಮುಖ್ಯ ಕಾರಣ ಮಾರುಕಟ್ಟೆಯ ಸಮಯ ಮತ್ತು ಸಾಲದ ಒತ್ತಡ.

ಭಾರತೀಯ ಕೃಷಿ ಅನುಸಂಧಾನ ಪರಿಷತ್() ಪ್ರಕಾರ, ಮಾರ್ಚ್‌ನಿಂದ ಜೂನ್ ನಡುವೆ ಕಟಾವಾಗುವ ಹಿಂಗಾರು ಬೆಳೆಯು ದೇಶದ ಒಟ್ಟು ಉತ್ಪಾದನೆಯ ಸುಮಾರು ಶೇ.60ರಷ್ಟನ್ನು ಹೊಂದಿದೆ. ಕಟಾವಾದ ಈ ಹಿಂಗಾರು ಈರುಳ್ಳಿಯನ್ನೇ ವೈಜ್ಞಾನಿಕವಾಗಿ ಗೋದಾಮುಗಳಲ್ಲಿ ಸಂಗ್ರಹಿಸಿ, ಅಕ್ಟೋಬರ್-ನವೆಂಬರ್‌ನಲ್ಲಿ ಮುಂಗಾರಿನ ಹೊಸ ಬೆಳೆ ಬರುವವರೆಗೆ ಬಳಸಲಾಗುತ್ತದೆ. ಈಗ ಮಾರಾಟವಾಗುತ್ತಿರುವ ಬಹುಪಾಲು ಈರುಳ್ಳಿ ಮಾರ್ಚ್-ಏಪ್ರಿಲ್‌ನಲ್ಲಿ ಕೊಯ್ಲಾದ ಹಿಂಗಾರು ಬೆಳೆ.

ಬಿತ್ತನೆಬೀಜ, ಗೊಬ್ಬರ, ಕೀಟನಾಶಕ, ಟ್ರ್ಯಾಕ್ಟರ್ ಕೂಲಿ ಮತ್ತು ಕುಟುಂಬದ ಖರ್ಚುಗಳು ಸೇರಿದಂತೆ ಸಾಲದ ಒತ್ತಡದಲ್ಲಿರುವ ಸಣ್ಣ ಮತ್ತು ಮಧ್ಯಮ ರೈತರಿಗೆ ನಗದು ಬೇಕಿರುವುದರಿಂದ ಕಟಾವಾದ ಬೆಳೆಯನ್ನು ಕೂಡಲೇ ದರ ಕಡಿಮೆ ಇದ್ದರೂ ತಮ್ಮ ಬೆಳೆಯನ್ನು ಮಾರಾಟ ಮಾಡುತ್ತಾರೆ. ಅಲ್ಲದೆ ಈರುಳ್ಳಿ ಬೇಗ ಹಾಳಾಗುವ ಬೆಳೆಯಾಗಿದ್ದು, ಸರಿಯಾದ ತೇವಾಂಶ ಮತ್ತು ಉಷ್ಣಾಂಶ ನಿಯಂತ್ರಣವಿಲ್ಲದಿದ್ದರೆ ಶೇ 30ರಿಂದ 40ರಷ್ಟು ಕೊಳೆಯುತ್ತದೆ ಅಥವಾ ತೂಕ ಕಳೆದುಕೊಳ್ಳುತ್ತದೆ. ಇಂತಹ ನಷ್ಟದ ಅಪಾಯ, ಬಡ್ಡಿ ಮತ್ತು ಸಂಗ್ರಹಣಾ ವೆಚ್ಚವನ್ನು ಹೊರಲು ಎಲ್ಲ ರೈತರಿಗೂ ಆರ್ಥಿಕ ಸಾಮರ್ಥ್ಯವಿರುವುದಿಲ್ಲ. ಪರಿಣಾಮವಾಗಿ ಸಣ್ಣ ರೈತರು ಬೆಳೆ ಕಟಾವಾದ ಕೂಡಲೇ ಮಾರಾಟ ಮಾಡುತ್ತಾರೆ. ಈರುಳ್ಳಿ ಸಂಗ್ರಹಣಾ ಸಾಮರ್ಥ್ಯವಿರುವ ದೊಡ್ಡ ರೈತರು, ಖಾಸಗಿ ಸಂಗ್ರಹಕಾರರು ಹಾಗೂ ವ್ಯಾಪಾರಿ ಮಧ್ಯವರ್ತಿಗಳು ಈರುಳ್ಳಿಯನ್ನು ಕಾಪಿಟ್ಟುಕೊಳ್ಳುವುದರಿಂದ ಹೆಚ್ಚುವರಿ ಲಾಭ ಪಡೆಯುತ್ತಾರೆ.

ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಬಫರ್ ಸ್ಟಾಕ್(ಅನುಪಾತ ಸಂಗ್ರಹ) ವ್ಯವಸ್ಥೆಯನ್ನು ಬಳಸುತ್ತದೆ. ಈ ಬಾರಿ ಮತ್ತು ಮೂಲಕ ಈರುಳ್ಳಿ ಬಫರ್ ಸ್ಟಾಕ್ ನಿರ್ಮಿಸಿ, ಜುಲೈನಲ್ಲಿ ಬಫರ್ ಖರೀದಿ ದರವನ್ನು ಕ್ವಿಂಟಲ್‌ಗೆ ₹1,875ರಿಂದ ₹2,125ಕ್ಕೆ, ಅಂದರೆ ಸುಮಾರು ಶೇ.13ರಷ್ಟು ಹೆಚ್ಚಿಸಲಾಗಿತ್ತು. ಈಗ ಆಗಸ್ಟ್‌ನಲ್ಲಿ ದರ ಏರಿಕೆಯಾಗುತ್ತಿದ್ದಂತೆ ಸೆಪ್ಟೆಂಬರ್ ಮೊದಲ ವಾರದಿಂದ ಬಫರ್ ಸ್ಟಾಕ್‌ನ ಈರುಳ್ಳಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಸಾಧ್ಯತೆಯ ಬಗ್ಗೆ ವರದಿಗಳು ಬಂದಿವೆ.

ಬಫರ್ ಸ್ಟಾಕ್ ಬಿಡುಗಡೆ ಮಾಡಿದರೆ ನಗರಗಳ ಸಗಟು ಮಾರುಕಟ್ಟೆಯಲ್ಲಿ ತಾತ್ಕಾಲಿಕವಾಗಿ ದರದ ಏರಿಕೆ ತಗ್ಗಬಹುದು. ಆದರೆ ಇದು ತಾತ್ಕಾಲಿಕ ಶಮನ ನೀಡಬಲ್ಲದೇ ಹೊರತು ಶಾಶ್ವತ ಪರಿಹಾರವಾಗುವುದಿಲ್ಲ. ಈ ಸಮಸ್ಯೆಗೆ ಶಾಶ್ವತ ಮುಕ್ತಿ ಸಿಗಬೇಕಾದರೆ, ಸರ್ಕಾರ ಮೂಲಸೌಕರ್ಯ ಮತ್ತು ಮಾರುಕಟ್ಟೆ ನೀತಿಯಲ್ಲಿ ಆಮೂಲಾಗ್ರ ಬದಲಾವಣೆ ತರಬೇಕಿದೆ.

ಬಫರ್ ವ್ಯವಸ್ಥೆಯ ಉದ್ದೇಶ ಕೇವಲ ಗ್ರಾಹಕರ ದರ ಕಡಿಮೆ ಮಾಡುವುದಷ್ಟೇ ಆಗಬಾರದು. ಬೆಳೆ ಬಂದಾಗ ರೈತನಿಗೆ ಕನಿಷ್ಠ ಸಮಂಜಸ ದರ ನೀಡುವ ಖರೀದಿ ವ್ಯವಸ್ಥೆ ಮತ್ತು ದರ ಏರಿದಾಗ ಗ್ರಾಹಕರಿಗೆ ಸಮಂಜಸ ಬೆಲೆಯಲ್ಲಿ ಬಿಡುಗಡೆ ಮಾಡುವ ಎರಡು ಉದ್ದೇಶಗಳೂ ಒಂದೇ ವ್ಯವಸ್ಥೆಯಲ್ಲಿರಬೇಕು. ಖರೀದಿ ಕೆಲವೇ ದೊಡ್ಡ ಉತ್ಪಾದನಾ ಪ್ರದೇಶಗಳಿಗೆ ಸೀಮಿತವಾಗದೆ ಕರ್ನಾಟಕದಂತಹ ರಾಜ್ಯಗಳ ಪ್ರಮುಖ ಈರುಳ್ಳಿ ಬೆಲ್ಟ್‌ಗಳಿಗೂ ಪರಿಣಾಮಕಾರಿಯಾಗಿ ತಲುಪಿದರೆ ರೈತರಿಗೆ ನೇರ ಪ್ರಯೋಜನವಾಗುತ್ತದೆ.

ಶಾಶ್ವತ ಪರಿಹಾರಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳು:

ಸ್ಥಳೀಯ ವೈಜ್ಞಾನಿಕ ಗೋದಾಮುಗಳು: ಈರುಳ್ಳಿ ಬೆಲೆ ವರ್ಷದಿಂದ ವರ್ಷಕ್ಕೆ ಇದೇ ರೀತಿಯ ಚಕ್ರದಲ್ಲಿ ಸಿಲುಕಬಾರದೆಂದರೆ ಉತ್ಪಾದನೆಯಷ್ಟೇ ಸಂಗ್ರಹಣೆಯ ಮೇಲೂ ಸರ್ಕಾರ ಹೂಡಿಕೆ ಮಾಡಬೇಕಿದ್ದು, ಚಿತ್ರದುರ್ಗ, ಚಳ್ಳಕೆರೆ, ಬಾಗಲಕೋಟೆ, ವಿಜಯಪುರ, ಗದಗ ಮತ್ತು ಧಾರವಾಡದಂತಹ ಪ್ರಮುಖ ಈರುಳ್ಳಿ ಬೆಳೆಯುವ ಪ್ರದೇಶಗಳಲ್ಲಿ ರೈತರು ಅಥವಾ ರೈತ ಉತ್ಪಾದಕ ಸಂಸ್ಥೆಗಳಿಗೆ() ವೈಜ್ಞಾನಿಕ ಸಂಗ್ರಹಣಾ ಘಟಕಗಳನ್ನು ನಿರ್ಮಿಸಲು ಹೆಚ್ಚಿನ ನೆರವು ನೀಡಬೇಕು.

ಗೋದಾಮು ರಸೀದಿ ಆಧಾರಿತ ಬೆಲೆ : ರೈತರು, ಕಟಾವಾದ ಬೆಳೆಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವುದನ್ನು ತಪ್ಪಿಸಲು ಗೋದಾಮು ರಸೀದಿ ಆಧಾರಿತ ಕಡಿಮೆ ಬಡ್ಡಿ ಸಾಲ ವ್ಯವಸ್ಥೆಯನ್ನು ಬಲಪಡಿಸಬೇಕು. ರೈತ ತನ್ನ ಉತ್ಪನ್ನವನ್ನು ಸಂಗ್ರಹಿಸಿ ಅದನ್ನು ಅಡಮಾನವಾಗಿ ಇಟ್ಟು ಸಾಲ ಪಡೆದು, ಉತ್ತಮ ದರ ಬಂದಾಗ ಮಾರಲು ಸಾಧ್ಯವಾಗಬೇಕು. ಇದರಿಂದ ರೈತನಿಗೆ ಉತ್ತಮ ದರ ಬರುವವರೆಗೆ ಕಾಯುವ ವಿಶ್ವಾಸ ಮೂಡುತ್ತದೆ.

ಪಾರದರ್ಶಕ ಮಾರುಕಟ್ಟೆ ಮಾಹಿತಿ: ಮಾರುಕಟ್ಟೆಗೆ ಬರುತ್ತಿರುವ ಈರುಳ್ಳಿ ಪ್ರಮಾಣ, ಖಾಸಗಿ ಹಾಗೂ ಸರ್ಕಾರಿ ಸಂಗ್ರಹಣೆಯ ನಿಖರ ದತ್ತಾಂಶ ಪಾರದರ್ಶಕವಾಗಿರಬೇಕು. ಮಾಹಿತಿಯ ಕೊರತೆಯೇ ಕೃತಕ ಅಭಾವ ಮತ್ತು ಊಹಾಪೋಹದ ದರ ಏರಿಕೆಗೆ ಹಾದಿಮಾಡಿಕೊಡುತ್ತದೆ. ಹಾಗಾಗಿ ಪಾರದರ್ಶಕ ಮಾರುಕಟ್ಟೆ ಮಾಹಿತಿಯನ್ನು ಸಾರ್ವಜನಿಕವಾಗಿ ಒದಗಿಸಬೇಕು.

ಸ್ಥಳೀಯ ಹೊಸ ಈರುಳ್ಳಿ ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ಆವಕವಾಗುವವರೆಗೂ ಗ್ರಾಹಕರಿಗೆ ತಕ್ಷಣದ ದರ ಇಳಿಕೆ ನಿರೀಕ್ಷಿಸುವುದು ಕಷ್ಟ. ಆದರೆ ಸೆಪ್ಟೆಂಬರ್ ನಂತರ ಹೊಸ ಬೆಳೆ ಬಂದಾಗ ಮಾರುಕಟ್ಟೆ ಸ್ಥಿರಗೊಳ್ಳಬಹುದು. ಭಾರತದ ಈರುಳ್ಳಿ ಮಾರುಕಟ್ಟೆಯಲ್ಲಿ ಗ್ರಾಹಕ ದುಬಾರಿಯಾಗಿದೆ ಎಂದಾಗ, ರೈತ ನನಗೆ ಸೂಕ್ತ ಬೆಲೆ ಸಿಕ್ಕಿಲ್ಲ ಎನ್ನುವುದು ಸಹಜವೆಂಬಂತಾಗಿದೆ. ಹಾಗಾಗಿ ಈ ಇಬ್ಬರ ನಡುವಿರುವ ಸಾಗಣೆ, ನಷ್ಟ, ಸಂಗ್ರಹಣಾ ಅಸಮಾನತೆ ಮತ್ತು ಮಧ್ಯವರ್ತಿಗಳ ಸರಪಳಿಯನ್ನು ಸರಿಪಡಿಸುವುದು ಅತ್ಯಗತ್ಯ.

ಬೆಲೆ ಏರಿದಾಗ ಗ್ರಾಹಕನಿಗೆ ಅಗ್ಗದ ದರದಲ್ಲಿ ಈರುಳ್ಳಿ ನೀಡುವುದು ಎಷ್ಟು ಮುಖ್ಯವೋ, ಹೊಸ ಬೆಳೆ ಮಾರುಕಟ್ಟೆಗೆ ಬಂದಾಗ ಬೆಲೆ ಕುಸಿದು ರೈತ ಬೀದಿಗೆ ಬೀಳದಂತೆ ರಕ್ಷಿಸುವುದೂ ಅಷ್ಟೇ ಮುಖ್ಯ. ಈ ಎರಡೂ ತುದಿಗಳನ್ನು ಸಮತೋಲನಗೊಳಿಸುವ ನ್ಯಾಯಯುತ ಮಾರುಕಟ್ಟೆ ವ್ಯವಸ್ಥೆಯನ್ನು ನಿರ್ಮಿಸುವುದೇ ಸರ್ಕಾರದ ಮುಂದಿರುವ ನೈಜ ಸವಾಲು.

ದೊಡ್ಡಣ್ಣನ ನೆಲದಲ್ಲಿ ಕನ್ನಡದ ದೊಡ್ಡಕ್ಕ; ಸೆ.4ರಿಂದ 6 ಫಿಲಡೆಲ್ಫಿಯಾದಲ್ಲಿ ಅಕ್ಕ ರಜತ ಮಹೋತ್ಸವ

ಉತ್ತರ ಅಮೆರಿಕದಾದ್ಯಂತ ಹರಡಿಕೊಂಡಿರುವ ಈ ಅಕ್ಕನ ಬಳಗ ಅತಿ ವಿಶಾಲವಾದುದು. 40ಕ್ಕೂ ಹೆಚ್ಚು ಪ್ರಾದೇಶಿಕ ಕನ್ನಡ ಕೂಟಗಳ ಮೂಲಕ ಎರಡು ಲಕ್ಷಕ್ಕೂ ಅಧಿಕ ಕನ್ನಡಿಗರನ್ನು ತಲುಪಿರುವ ಈ ಸಂಸ್ಥೆ, ಕರುನಾಡಿನಿಂದ ಸಾವಿರಾರು ಮೈಲುಗಳಷ್ಟು ದೂರದಲ್ಲಿದ್ದರೂ ಕನ್ನಡದ ಕಂಪನ್ನು ಪಸರಿಸುತ್ತ ಬಂದಿದೆ.

2026ರಲ್ಲಿ ಅಕ್ಕ ತನ್ನ 25ನೇ ವಾರ್ಷಿಕೋತ್ಸವದ ರಜತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಸೆಪ್ಟೆಂಬರ್ 4, 5 ಮತ್ತು 6ರಂದು ಅಮೆರಿಕದ ಐತಿಹಾಸಿಕ ಫಿಲಡೆಲ್ಫಿಯಾ ನಗರದಲ್ಲಿ ನಡೆಯಲಿರುವ ಈ ಮಹಾಸಂಭ್ರಮಕ್ಕೆ ವಿಶ್ವದಾದ್ಯಂತ ಇರುವ ಕನ್ನಡಿಗರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲು ಅಕ್ಕ ಸಜ್ಜಾಗಿದೆ. ಸಮ್ಮೇಳನವು ದಲ್ಲಿರುವ ನಲ್ಲಿ ನಡೆಯಲಿದೆ.

ತವರುಮನೆ ಅಂದರೆ ಈ ಅಕ್ಕನಿಗೆ ಅಚ್ಚುಮೆಚ್ಚು. ಪ್ರತಿ ಎರಡು ವರ್ಷಗಳಿಗೊಮ್ಮೆ ತನ್ನವರೊಂದಿಗೆ ನಕ್ಕು-ನಲಿಯಲು, ತವರಿನವರನ್ನು ತನ್ನ ಅಂಗಳಕ್ಕೆ ಆಹ್ವಾನಿಸುತ್ತಾಳೆ. ಅಕ್ಕನ ಹೃದಯ ಅತಿ ದೊಡ್ಡದು; ತನ್ನವರು ದೂರದೇಶದಿಂದ ಬಂದಾಗ ಅವರಿಗೆ ಆಸರೆಯಾಗಿ ನಿಲ್ಲುತ್ತಾಳೆ, ಪ್ರೀತಿಯ ಕೈತುತ್ತು ನೀಡಿ ಸೋದರತ್ವವನ್ನು ಮೆರೆಯುತ್ತಾಳೆ. ಉಣಿಸಿ, ಉಡಿಸಿ, ತನ್ನೂರಿನ ಸಂಸ್ಕೃತಿಯನ್ನು ಪರಿಚಯಿಸಿ, ಎಲ್ಲರೊಂದಿಗೆ ಕುಣಿದು ಕುಪ್ಪಳಿಸಿ ಸಂತಸಪಡುವುದು ಈ ಅಕ್ಕನ ಹೆಗ್ಗಳಿಕೆ.

ಇಡೀ ಉತ್ತರ ಅಮೆರಿಕವನ್ನೇ ಸಾಂಸ್ಕೃತಿಕವಾಗಿ ಬೆಸೆಯುತ್ತಿರುವ ಈ ಅಕ್ಕ, ತನ್ನ ರಜತ ಮಹೋತ್ಸವಕ್ಕೆ ವಿಶ್ವದಾದ್ಯಂತ ಇರುವ ಸಾವಿರಾರು ಕನ್ನಡಿಗರನ್ನು ಬರಮಾಡಿಕೊಳ್ಳುತ್ತಿದೆ. ಅಮೆರಿಕ, ಕೆನಡಾ ಹಾಗೂ ತವರುಮನೆಯಾದ ಕರ್ನಾಟಕದಿಂದ ಸುಮಾರು ಸಂಖ್ಯೆಯ ಕನ್ನಡಿಗರು ಈ ಮಹಾಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ರಜತ ಮಹೋತ್ಸವದ ಸಮಾರಂಭಕ್ಕೆ ನೀವೂ ಬರಬೇಕು; ಅಲ್ಲದೆ, ನಿಮ್ಮದೊಂದು ಲೇಖನವು ರಜತ ಮಹೋತ್ಸವದ ಸ್ಮರಣ ಸಂಚಿಕೆಯಲ್ಲಿರಬೇಕೆಂದು ಸಂಘಟಕರು ಕೋರಿದರು. ಅವರ ಕರೆಗೆ ಸಂತೋಷ ವ್ಯಕ್ತಪಡಿಸಿ ಲೇಖನ ಕಳುಹಿಸುವುದಾಗಿ ಹೇಳುತ್ತಾ ಮಾತಿಗಿಳಿದೆ. ದೂರದ ಊರಿನಲ್ಲಿ ನಡೆಯಲಿರುವ ಸಮಾರಂಭದ ಸಿದ್ಧತೆ ಕುರಿತು ಕುತೂಹಲ ತಣಿಸಿಕೊಳ್ಳುವುದು ನನ್ನ ಉದ್ದೇಶವಾಗಿತ್ತು.

ಅಮೆರಿಕದ ಅಕ್ಕ ಸಂಸ್ಥೆಯ ಹಣಕಾಸಿನ ಗುರುತರ ಜವಾಬ್ದಾರಿ ಹೊತ್ತಿರುವ ಸಹೋದರ ಚಂದ್ರು ಆರಾಧ್ಯ ಅವರಿಗೆ, ''ನೀವು ದೊಡ್ಡ ಜವಾಬ್ದಾರಿ ವಹಿಸಿಕೊಂಡಿದ್ದೀರಿ. ಪ್ರತಿ ಕ್ಷಣವೂ ನಿಮಗೆ ಮುಖ್ಯ. ಈ ಸಂದರ್ಭದಲ್ಲಿ ನಾಲ್ಕಾರು ಕುತೂಹಲದ ಪ್ರಶ್ನೆಗಳನ್ನು ಕೇಳಬಹುದೇ?'' ಎಂದೆ.

ಪ್ರಶ್ನೆ: ವಿಶ್ವದಾದ್ಯಂತ ನೆಲೆಸಿರುವ ಸಾವಿರಾರು ಕನ್ನಡಿಗರನ್ನು ಆಹ್ವಾನಿಸುತ್ತಿರುವುದಾಗಿ ಕೇಳಿರುವೆ. ಅಷ್ಟೊಂದು ಜನರಿಗೆ ಊಟ, ಉಪಚಾರ, ವಸತಿ ಒದಗಿಸುವುದು, ಮತ್ತು ಇವೆಲ್ಲಕ್ಕೂ ಬೇಕಾಗುವ ಸ್ವಯಂಸೇವಕರನ್ನು ಒಗ್ಗೂಡಿಸುವುದು ಅಮೆರಿಕದಂತಹ ದೇಶದಲ್ಲಿ ಕಠಿಣವಲ್ಲವೇ?

ಚಂದ್ರು ಆರಾಧ್ಯ: 13ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನವನ್ನು ಅಕ್ಕ ನಾಯಕತ್ವದಲ್ಲಿ ಫಿಲಡೆಲ್ಫಿಯಾ ಮತ್ತು ಸುತ್ತಮುತ್ತಲಿನ ಕನ್ನಡ ಸಮುದಾಯ ಹಾಗೂ ಸ್ಥಳೀಯ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಲಾಗುತ್ತಿದೆ. ಇಲ್ಲಿರುವ ಪ್ರಾದೇಶಿಕ ಕನ್ನಡ ಸಂಘಟನೆಗಳು, ವಿವಿಧ ಸಮಿತಿಗಳು ಹಾಗೂ ಉತ್ತರ ಅಮೆರಿಕದ ನೂರಾರು ಸ್ವಯಂಸೇವಕರು ಕೈಜೋಡಿಸಿದ್ದಾರೆ.

ಮೂರು ದಿನಗಳಲ್ಲಿ ಸಾವಿರಾರು ಜನರಿಗೆ ದಿನಕ್ಕೆ ಹಲವು ಬಾರಿ ಊಟ ನೀಡುವುದು ಬಹುದೊಡ್ಡ ಕೆಲಸ. ಆಹಾರ, ಆತಿಥ್ಯ, ಮೂಲಸೌಕರ್ಯ, ಊಟ ವಿತರಿಸುವ ಕೌಂಟರ್‌ಗಳು, ಆಸನಸಾಮರ್ಥ್ಯ, ಜನಸಂದಣಿ ನಿರ್ವಹಣೆ, ವಿತರಣೆಯ ವೇಳಾಪಟ್ಟಿ ಸೇರಿದಂತೆ ಪ್ರತಿಯೊಂದು ವಿಷಯವನ್ನೂ ಸೂಕ್ಷ್ಮವಾಗಿ ಗಮನಿಸಿ ಆಯೋಜಿಸಲಾಗುತ್ತಿದೆ. ಇದಕ್ಕೆಲ್ಲ ಸ್ವಯಂಸೇವಕರ ಒಂದು ದೊಡ್ಡ ತಂಡ ಸಜ್ಜಾಗಿದೆ. ಅವರಿಗೆ ಸೂಕ್ತ ತರಬೇತಿ ನೀಡಿ ಕಾರ್ಯನಿರ್ವಹಿಸಲು ಸಿದ್ಧಗೊಳಿಸಲಾಗಿದೆ.

ಪ್ರಶ್ನೆ: ಇದು ಅಕ್ಕನ ರಜತ ಮಹೋತ್ಸವದ ಮಹತ್ವದ ವರ್ಷ. ಇಂತಹ ಸಂತೋಷದ ಗಳಿಗೆಗಳನ್ನು ಹೇಗೆ ಆಚರಿಸುತ್ತೀರಿ?

ಚಂದ್ರು ಆರಾಧ್ಯ: ಫಿಲಡೆಲ್ಫಿಯಾ ಒಂದು ಐತಿಹಾಸಿಕ ನಗರ. 1776ರಲ್ಲಿ ಅಮೆರಿಕದ ಸ್ವಾತಂತ್ರ್ಯ ಘೋಷಣೆಗೆ ಸಂಬಂಧಿಸಿದ ಐತಿಹಾಸಿಕ ಘಟನೆಗಳ ಪ್ರಮುಖ ಕೇಂದ್ರವಾಗಿದ್ದ ನಗರವಿದು. 2026ರಲ್ಲಿ ಅಮೆರಿಕ ತನ್ನ 250ನೇ ಸ್ವಾತಂತ್ರ್ಯೋತ್ಸವದ ಸಂಭ್ರಮವನ್ನು ಆಚರಿಸುತ್ತಿದೆ. ಕಾಕತಾಳೀಯವೆಂಬಂತೆ ಇದೇ ವರ್ಷ ಅಕ್ಕ ತನ್ನ 25ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ.

ಇಂತಹ ಐತಿಹಾಸಿಕ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಲು ನಾವು ಉತ್ಸುಕರಾಗಿದ್ದೇವೆ. ಅನಿವಾಸಿ ಕನ್ನಡಿಗರಾದ ನಾವು ಕನ್ನಡ ಸಂಗೀತ, ಕನ್ನಡ ಸಾಹಿತ್ಯ, ಕನ್ನಡ ರಂಗಭೂಮಿ, ಕನ್ನಡ ಸಿನಿಮಾ, ಕನ್ನಡ ಕಲಾವಿದರು ಹಾಗೂ ಸ್ಥಳೀಯ ಕಲಾವಿದರೆಲ್ಲರೂ ಸೇರಿ ವಿವಿಧ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ.

ಕರ್ನಾಟಕದ ಕನ್ನಡ ಸಂಘಟನೆಗಳು ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಅಪಾರವಾಗಿ ಶ್ರಮಿಸಿವೆ. ಅನಿವಾಸಿ ಕನ್ನಡಿಗರಾದ ನಾವು ಈ ಸಂಸ್ಕೃತಿಯನ್ನು ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗರಿಗೆ ಹಾಗೂ ಇಲ್ಲಿ ಜನಿಸಿದ ಮುಂದಿನ ಪೀಳಿಗೆಗೆ ವರ್ಗಾಯಿಸುವ ಹೊಣೆಯನ್ನೂ ಹೊತ್ತಿದ್ದೇವೆ.

ಇದರೊಂದಿಗೆ ವಿಜ್ಞಾನ, ತಂತ್ರಜ್ಞಾನ, ನಾಯಕತ್ವ ಹಾಗೂ ಹೊಸ ಆಲೋಚನೆಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ಹಲವು ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿದ್ದೇವೆ.

ಪ್ರಶ್ನೆ: ಭಾರತದಲ್ಲಿ ಜನ್ಮತಳೆದು ಅಮೆರಿಕದ ನಿವಾಸಿಗಳಾದ ತಾವು, ತಾಯ್ನುಡಿಯನ್ನು ಮರೆಯದೆ ಅದಕ್ಕೆ ವಿಶ್ವದರ್ಜೆಯ ಸ್ಥಾನಮಾನ ದೊರಕಿಸಿಕೊಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸ್ತುತ್ಯರ್ಹ. ಹೊಸ ತಲೆಮಾರಿನ ಅನಿವಾಸಿ ಕನ್ನಡಿಗರಿಗೆ ಇವೆಲ್ಲದರ ಬಗ್ಗೆ ಆಸಕ್ತಿ ಕಡಿಮೆಯಾಗಿರಬಹುದು. ಅವರಿಗಾಗಿ ವಿಭಿನ್ನವಾದ ಕಾರ್ಯಕ್ರಮಗಳೇನಾದರೂ ಹಾಕಿಕೊಂಡಿದ್ದೀರಾ?

ಚಂದ್ರು ಆರಾಧ್ಯ: ಬಹಳ ಮುಖ್ಯವಾದ ಪ್ರಶ್ನೆ. ಆದರೆ ನಿಮ್ಮ ಮಾತನ್ನು ನಾನು ಒಪ್ಪುವುದಿಲ್ಲ. ಅನಿವಾಸಿ ಭಾರತೀಯ ಯುವಪೀಳಿಗೆ ಭಾರತೀಯ ಸಂಸ್ಕೃತಿಯ ಪ್ರತೀಕದಂತಿದೆ ಎಂದು ನಾನು ಹೆಮ್ಮೆಯಿಂದ ಹೇಳಬಯಸುತ್ತೇನೆ. ಹತ್ತು ಸಾವಿರ ಮೈಲುಗಳಾಚೆ ಇದ್ದರೂ ಇವರು ಭಾರತೀಯ ಪರಂಪರೆಯನ್ನು ಗೌರವಿಸುತ್ತಾ, ಹೊಸ ಆವಿಷ್ಕಾರಗಳಿಗೂ ಹೊಂದಿಕೊಳ್ಳುತ್ತಿದ್ದಾರೆ.

ಅಕ್ಕ ರಜತ ಮಹೋತ್ಸವದ ಶುಭ ಸಂದರ್ಭದಲ್ಲಿ ಅವರಿಗಾಗಿ 4 ಅಕ್ಕ ಹ್ಯಾಕಥಾನ್ ಎಂಬ ನವೀನ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ. ಇದರಲ್ಲಿ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಉದ್ಯಮಶೀಲತೆ ಮತ್ತು ಸಮುದಾಯದ ಒಳಿತಿಗಾಗಿ ಕಾರ್ಯನಿರ್ವಹಿಸುವ ಪ್ರಯತ್ನಗಳು ಅಡಕವಾಗಿವೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR